ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಮೇ 26, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 12 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999

## ಅಲೆಮಾರಿಗಳ ಸಮಸ್ಯೆ ಆಲಿಸಿದ ಡಿಸಿ

### ಶೀಘ್ರ ಗ್ರಾಮಗಳಿಗೆ ತೆರಳಿ ಅಲ್ಲೇ ಉದ್ಯೋಗ ಮಾಡುವಂತೆ ಸಲಹೆ

ದಾವಣಗೆರೆ, ಮೇ 25- ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡ ಬನಶಂಕರಿ ಬಡಾವಣೆ ಬಳಿಯ ಸೇವಾ ರಸ್ತೆ ಪಕ್ಕದಲ್ಲಿ ವಿವಿಧ ಟೆಂಟ್‌ಗಳಲ್ಲಿ ವಾಸಿಸುತ್ತಿದ್ದ ಅಲೆಮಾರಿ ಕುಟುಂಬಗಳನ್ನು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಭೇಟಿ ಮಾಡಿ, ಕುಂದು ಕೊರತೆಗಳನ್ನು ಆಲಿಸಿದರು.

ಕಳೆದೆರಡು ದಿನಗಳಿಂದ ವಿವಿಧೆಡೆ ಗಾಳಿ, ಸಿಡಿಲು, ಮಳೆಯಾಗುತ್ತಿದ್ದು ಬಯಲು ಪ್ರದೇಶದಲ್ಲಿ ಈ ಜನರು ವಾಸಿಸುತ್ತಿದ್ದು, ಈಗಾಗಲೇ ರಾಜ್ಯದಲ್ಲಿ ಅನೇಕ ಕಡೆ ಮಳೆ, ಸಿಡಿಲಿಗೆ ಜನ, ಜಾನುವಾರುಗಳು ಸಾವನ್ನಪ್ಪಿದ್ದು, ಈ ಹಿನ್ನೆಲೆಯಲ್ಲಿ ಅವರ ಕಷ್ಟಗಳನ್ನು ಜಿಲ್ಲಾಧಿಕಾರಿಗಳು ಆಲಿಸಿದರು.

ಇಲ್ಲಿ ಒಟ್ಟು 21 ಕುಟುಂಬಗಳು ವಾಸಿಸುತ್ತಿದ್ದು, ಇದರಲ್ಲಿ ಕಲಬುರಗಿ ಜಿಲ್ಲೆಯ ಚಿಂಚೊಳ್ಳಿಯ ಕೆಲವು ಕುಟುಂಬಗಳು ಗ್ಯಾಸ್ ಸ್ಟವ್ ರಿಪೇರಿ (2ನೇ ಪುಟಕ್ಕೆ)



# 20 ಸಾವಿರ ಕೋಟಿ ರೂ. ಕಾಮಗಾರಿ ರದ್ದು

### ಬೊಮ್ಮಾಯಿ ಸರ್ಕಾರ ಕೊನೆ ಅವಧಿಯಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಸಿಎಂ ತಡೆ



ಬೆಂಗಳೂರು, ಮೇ 25 - ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಆಡಳಿತದ ಕೊನೆಯ ಅವಧಿಯಲ್ಲಿ ತೆಗೆದುಕೊಂಡ 20 ಸಾವಿರ ಕೋಟಿ ರೂ.ಗೂ ಹೆಚ್ಚು ಗುತ್ತಿಗೆ ಕಾಮಗಾರಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ರದ್ದುಪಡಿಸಿದ್ದಾರೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ಅನೇಕ ನೀರಾವರಿ ಕಾಮಗಾರಿಗಳು ಹಣಕಾಸಿನ ಸೂಕ್ತ ಅನುದಾನವಿಲ್ಲದೆ, ಕಾಮಗಾರಿಗಳ ಟೆಂಡರ್‌ಗಳನ್ನು ಕರೆದಿದ್ದು, ಇಲಾಖೆಯ ನಿಗಮಗಳಾದ ವಿಜೆಎನ್‌ಎಲ್, ಕೆಎನ್‌ಎನ್‌ಎಲ್, ಸಿಎನ್‌ಎನ್‌ಎಲ್, ಕೆಬಿಜೆಎನ್‌ಎಲ್, ಇಂಧನ ಮತ್ತು ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಜಲಜೀವನ್ ಮಿಷನ್ ಕರಾರು ಪತ್ರ ಕೂಡ ಆಗಿರುತ್ತವೆ.

ಹಣಕಾಸು, ಭೂ ಸ್ವಾಧೀನ ತೊಂದರೆಯಿದ್ದರೂ, ಹೊಸದಾಗಿ ತರಾತುರಿಯಲ್ಲಿ ಟೆಂಡರ್ ನಿಯಮಗಳನ್ನು ಉಲ್ಲಂಘಿಸಿ ಕರೆದಿರುವ ಟೆಂಡರ್‌ಗಳಿಗೆ ಸುಮಾರು 20 ಸಾವಿರ ಕೋಟಿ ರೂ.ಗಳ ಅನುಮೋದನೆ ಅಗತ್ಯ ಇರುತ್ತದೆ.

ಈ ಕಾಮಗಾರಿಗಳು ಅವೈಜ್ಞಾನಿಕವಾಗಿರುತ್ತವೆ ಎಂದು ವ್ಯಾಪಕ ದೂರುಗಳಿವೆ. ಕೆಲವು ಕಾಮಗಾರಿಗಳಲ್ಲಿ ಅಕ್ರಮಗಳು ನಡೆದಿದೆ ಎಂಬ ದೂರುಗಳು ಸಹ ಇವೆ.

ಇವುಗಳನ್ನು ಸೂಕ್ತವಾಗಿ ಪರಿಶೀಲಿಸಬೇಕಾಗಿರುವುದರಿಂದ ಮುಂದಿನ ಆದೇಶದವರೆಗೆ ಪ್ರಾರಂಭ ಆಗದಿರುವ ಕಾಮಗಾರಿಗಳನ್ನು ಕೂಡಲೇ (2ನೇ ಪುಟಕ್ಕೆ)

## ಶನಿವಾರ ಸಂಪುಟ ವಿಸ್ತರಣೆ

### ಪ್ರಮಾಣ ವಚನಕ್ಕೆ ಮುಹೂರ್ತ ನಿಗದಿ

ಬೆಂಗಳೂರು, ಮೇ 25 – ಬರುವ ಶನಿವಾರದಂದು ಸಂಪುಟ ವಿಸ್ತರಣೆಗೆ ಮುಹೂರ್ತ ನಿಗದಿಯಾಗಿದೆ. ಸಂಪುಟ ವಿಸ್ತರಣೆಗಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ಅವರ ಅನುಮತಿ ಕೋರಿತ್ತು. ರಾಜ್ಯಪಾಲರು ಅನುಮತಿ ನೀಡಿದ್ದಾರೆ.

ಶನಿವಾರ ಬೆಳಿಗ್ಗೆ 11.45ಕ್ಕೆ ಗಂಟೆಗೆ ನೂತನ ಸಚಿವರ ಪ್ರಮಾಣ ವಚನಕ್ಕೆ ಅನುಮತಿ ಕೇಳಲಾಗಿದೆ. ಇದುವರೆಗೂ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಸೇರಿದಂತೆ ಹತ್ತು ಸಚಿವರು ಸಂಪುಟದಲ್ಲಿದ್ದಾರೆ. ಆದರೆ, ಯಾರಿಗೂ ಇದುವರೆಗೂ ಖಾತೆ ಹಂಚಿಕೆಯಾಗಿಲ್ಲ.

ಈ ಬಾರಿ 24 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಇದರೊಂದಿಗೆ ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಯಾಗಲಿದೆ. ಸಂಪುಟದಲ್ಲಿ ಗರಿಷ್ಠ 34 ಸಚಿವರಿಗೆ ಅವಕಾಶ ಇದೆ.

ಈಶ್ವರ ಖಂಡ್ರೆ, ಲಕ್ಷ್ಮಿ ಹೆಬ್ಬಾಳ್ಕರ್, ಶಿವಾನಂದ ಪಾಟೀಲ್, ಶರಣಬಸಪ್ಪ ದರ್ಶನಾಪುರ, ಬಸವರಾಜ (3ನೇ ಪುಟಕ್ಕೆ)

## ತಮಿಳುನಾಡಿನಿಂದಲೂ ಅಮುಲ್‌ಗೆ ವಿರೋಧ

ನವದೆಹಲಿ, ಮೇ 25 - ತಮಿಳುನಾಡಿನಲ್ಲಿ ಅಮುಲ್ ಸಂಸ್ಥೆಯ ಹಾಲು ಖರೀದಿ ಕೇಂದ್ರಗಳನ್ನು ತೆರೆಯಬಾರದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾಗೆ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಪತ್ರ ಬರೆದಿದ್ದಾರೆ.

ಕರ್ನಾಟಕದಲ್ಲಿ ಅಮುಲ್ ಘಟಕದ ಕಾರ್ಯನಿರ್ವಹಣೆ ಬಗ್ಗೆ ವಿಧಾನಸಭಾ ಚುನಾವಣೆಯ ವೇಳೆ ತೀವ್ರವಾಗಿ ಆಕ್ಷೇಪಿಸಲಾಗಿತ್ತು. ನಂತರ ಈಗ ತಮಿಳುನಾಡಿನಲ್ಲಿ ವಿವಾದ ಸೃಷ್ಟಿಯಾಗಿದೆ. ಅಮುಲ್ ಸಂಸ್ಥೆಯು ತಮಿಳುನಾಡಿನಲ್ಲಿ ಹಾಲು ಖರೀದಿ ಆರಂಭಿಸಿದರೆ ತಮಿಳುನಾಡಿನ ಆವಿನ್ ಸಂಸ್ಥೆಯ ಏಕಸ್ವಾಮ್ಯಕ್ಕೆ ಧಕ್ಕೆಯಾಗಲಿದೆ ಎಂದು (3ನೇ ಪುಟಕ್ಕೆ)

## ಪಡಿತರ: ಫೋರ್ಟಿಫೈಡ್ ಅಕ್ಕಿ ಪೂರೈಕೆಗೆ ಕಾಂಗ್ರೆಸ್ ಆಕ್ಷೇಪ

ನವದೆಹಲಿ, ಮೇ 25 - ಕೇಂದ್ರ ಸರ್ಕಾರ ಅವಸರದಿಂದ ಪಡಿತರ ಮೂಲಕ ಫೋರ್ಟಿಫೈಡ್ ಅಕ್ಕಿ ಪೂರೈಕೆಗೆ ಕ್ರಮ ತೆಗೆದುಕೊಳ್ಳುತ್ತಿದೆ. ಸ್ವತಂತ್ರ ಸಂಶೋಧನೆ ನಡೆಸದೇ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ವಕ್ತಾರ ಪವನ್ ಖೇರ, ದೇಶದಲ್ಲಿ ಫೋರ್ಟಿಫೈಡ್ ಅಕ್ಕಿ ಪೂರೈಸುವ ಗುತ್ತಿಗೆಯನ್ನು ವಿದೇಶಿ ಸಂಸ್ಥೆಯಾದ ರಾಯಲ್ ಡಿಎಸ್‌ಎಂಗೆ ನೀಡಲಾಗಿದೆ. ಇದರಲ್ಲಿ ಭ್ರಷ್ಟಾಚಾರ ನಡೆದಿದೆಯೇ? ಎಂದು ಪ್ರಶ್ನಿಸಿದ್ದಾರೆ.

ದೇಶದ 439 ಜಿಲ್ಲೆಗಳಲ್ಲಿ ಪಡಿತರ ಮೂಲಕ ಫೋರ್ಟಿಫೈಡ್ ಅಕ್ಕಿ ವಿತರಿಸಲಾಗುವುದು ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ತಿಳಿಸಿತ್ತು. ಫೋರ್ಟಿಫೈಡ್ ಅಕ್ಕಿಯಿಂದ ಆರೋಗ್ಯ ಲಾಭವಾಗುವ ಬಗ್ಗೆ ಜಾಗತಿಕ (3ನೇ ಪುಟಕ್ಕೆ)

## ಲೋಕಸಭಾ ಚುನಾವಣೆ ನಂತರ ಏನು ಬೇಕಾದರೂ ಆಗಬಹುದು



ಬೆಂಗಳೂರು, ಮೇ 25 - ಲೋಕಸಭಾ ಚುನಾವಣೆ ಬಳಿಕ ಕಾಂಗ್ರೆಸ್ ಸರ್ಕಾರದ ಭವಿಷ್ಯ ಏನು ಬೇಕಾದರೂ ಆಗಬಹುದು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಕುಮಾರಸ್ವಾಮಿ ನೀಡಿದ ಹೇಳಿಕೆ ಬೆನ್ನಲ್ಲೇ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುದ್ದಿಗಾರರೊಂದಿಗೆ ಮಾತನಾಡಿ, ಮುಂದಿನ ನಾಲ್ಕೈದು ತಿಂಗಳಲ್ಲೇ ರಾಜ್ಯ ರಾಜಕೀಯದ ಚಿತ್ರಣವೇ ಬದಲಾಗುತ್ತದೆ ನೋಡಿ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ನಗರದ ಅರಮನೆ ಮೈದಾನದಲ್ಲಿ ಇಂದು ನಡೆದ ಜೆಡಿಎಸ್ ಆತ್ಮಾವಲೋಕನ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಮಾರಸ್ವಾಮಿ, ಈ ಸರ್ಕಾರದಲ್ಲಿ ವಿಶ್ವಾಸದ ಕೊರತೆ ಇದೆ. ಹೀಗಾಗಿ ಬಹಳ ದಿನ ಉಳಿಯುವುದು ಕಷ್ಟ. ಲೋಕಸಭಾ (3ನೇ ಪುಟಕ್ಕೆ)

## ಸಂಸತ್ ಭವನದ ಉದ್ಘಾಟನಾ ಸಮಾರಂಭಕ್ಕೆ ದೇವೇಗೌಡರು

ಬೆಂಗಳೂರು, ಮೇ 25 - ಬರುವ ಮೇ 28ರಂದು ನಡೆಯಲಿರುವ ಸಂಸತ್ ಭವನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವುದಾಗಿ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ತಿಳಿಸಿದ್ದಾರೆ.

**ಭವನ ದೇಶದ ಆಸ್ತಿ, ಬಿಜೆಪಿ ಇಲ್ಲವೇ ಆರ್‌ಎಸ್‌ಎಸ್ ಕಟ್ಟಡವಲ್ಲ ಎಂದ ಮಾಜಿ ಪ್ರಧಾನಿ**

ಸಂಸತ್ ಭವನ ಈ ದೇಶದ ಆಸ್ತಿ. ಅದು ಯಾರೊಬ್ಬರ ವೈಯಕ್ತಿಕ ವಿಷಯಕ್ಕೆ ಸಂಬಂಧಿಸಿದ್ದಲ್ಲ ಎಂದವರು ಹೇಳಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಪಕ್ಷದ ಆತ್ಮಾವಲೋಕನ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಆಹ್ವಾನ ನೀಡಿದ್ದಾರೆ ನಿಜ. ಆದರೆ, ಅದು ಅವರ ವೈಯಕ್ತಿಕ ಕಾರ್ಯಕ್ರಮ ಅಲ್ಲ, ದೇಶದ ಕಾರ್ಯಕ್ರಮ ಎಂದರು.

ನೂತನ ಸಂಸತ್ ಭವನದ ಕಟ್ಟಡ ಜನರ ತೆರಿಗೆ ಹಣದಿಂದ ನಿರ್ಮಾಣವಾಗಿದೆ. ಅದು ದೇಶಕ್ಕೆ ಸೇರಿದ್ದು. ಬಿಜೆಪಿ ಅಥವಾ ಆರೆಸ್ಸೆಸ್ ಕಚೇರಿ ಅಲ್ಲ. ಸಂಸತ್ ಭವನದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಓರ್ವ ಮಾಜಿ (2ನೇ ಪುಟಕ್ಕೆ)

### 20 ಸ್ವಾಮೀಜಿಗಳಿಗೆ ಆಹ್ವಾನ

**ಚೆನ್ನೈ, ಮೇ 25 - ನೂತನ ಸಂಸತ್ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ತಮಿಳುನಾಡಿನ 20 ಸ್ವಾಮೀಜಿಗಳಿಗೆ ಆಹ್ವಾನ ನೀಡಲಾಗಿದೆ. ಮೇ 28ರಂದು ನಡೆಯಲಿರುವ ಸಮಾರಂಭದಲ್ಲಿ ರಾಜದಂಡವನ್ನು ಅಳವಡಿಸಲಾಗುವುದು. 1947ರಲ್ಲೂ ಸಹ ಇದೇ ಪದ್ಧತಿ ಅನುಸರಿಸಿ ಬ್ರಿಟಿಷರು ಅಧಿಕಾರ ಹಸ್ತಾಂತರಿಸಿದ್ದರು.**

**ತಮಿಳುನಾಡು, ತೆಲಂಗಾಣ ಹಾಗೂ ನಾಗಾಲ್ಯಾಂಡ್‌ಗಳ ರಾಜ್ಯಪಾಲರ ಜೊತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ವಿಷಯ ತಿಳಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಜದಂಡ ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ತಮಿಳುನಾಡು ದೊಡ್ಡ ಹೆಮ್ಮೆಯ ಪಾತ್ರ ವಹಿಸಿದೆ ಎಂದು ಹೇಳಿದರು.**

# ರಾಜ ಕಾಲುವೆ ಹೂಳು ತೆಗೆಯುವ ಕಾರ್ಯ ಚುರುಕು

ದಾವಣಗೆರೆ, ಮೇ 25- ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ ಹಾಗೂ ಎಸ್. ಎಸ್. ಮಲ್ಲಿಕಾರ್ಜುನ್ ಆದೇಶದ ಮೇರೆಗೆ ಮಹಾನಗರ ಪಾಲಿಕೆ ಮೇಯರ್ ವಿನಾಯಕ್ ಪೈಲ್ವಾನ್ ನೇತೃತ್ವದ ತಂಡ ರಾಜ ಕಾಲುವೆಗಳಿಗೆ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿತು.

ಹೊಸ ಬಸ್ ನಿಲ್ದಾಣ, ಭಾರತ್ ಕಾಲೋನಿ ಹಾಗೂ ಬಸಾಪುರ ಗ್ರಾಮದಲ್ಲಿನ ರಾಜ ಕಾಲುವೆಗಳಲ್ಲಿ ತ್ಯಾಜ್ಯ ಹಾಗೂ ಹೂಳು ತೆಗೆಯುವ ಕೆಲಸ ನಡೆಯುತ್ತಿದ್ದು, ಆದಷ್ಟು ಬೇಗ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಮಳೆ ಸುರಿಯಲು ಶುರುವಾದರೆ ಕೆಲ ಮನೆಗಳಿಗೆ ನೀರು ನುಗ್ಗುತ್ತದೆ. ತ್ಯಾಜ್ಯ ಹಾಗೂ ಹೂಳು ಸಂಗ್ರಹವಾಗಿರುವುದರಿಂದ



ವಾತಾವರಣವೂ ಮಲಿನವಾಗುತ್ತದೆ. ಈ ಕಾರಣಕ್ಕಾಗಿ ಸ್ವಚ್ಛಗೊಳಿಸುವ ಕಾರ್ಯವನ್ನು ವೇಗವಾಗಿ ನಡೆಸಿ ಪೂರ್ಣಗೊಳಿಸುವಂತೆ ಮೇಯರ್ ವಿನಾಯಕ ಮತ್ತು ಆಯುಕ್ತರಾದ ರೇಣುಕಾ ಸೂಚಿಸಿದರು.

ಮಹಾನಗರ ಪಾಲಿಕೆ ವಿರೋಧ ಪಕ್ಷದ ಮಾಜಿ ನಾಯಕ ಗಡಿಗುಡಾಳ್ ಮಂಜುನಾಥ್, ಆಯುಕ್ತರಾದ ರೇಣುಕಾ, ಪಾಲಿಕೆ ಸದಸ್ಯರಾದ ಎ. ನಾಗರಾಜ್, ಕೆ. ಚಮನ್ ಸಾಬ್, ಜಗದೀಶ್, ಇಇ ಮನೋಹರ್ ಹಾಗೂ ಎಇಇ ಶೃತಿ ಅವರು ಸಹ ಭೇಟಿ ನೀಡಿ ಕೆಲಸ ವೀಕ್ಷಿಸಿದರು.

### ಮೇಯರ್ ನೇತೃತ್ವದ ತಂಡ ಭೇಟಿ-ಪರಿಶೀಲನೆ

ಈಗಾಗಲೇ ಹೂಳು, ತ್ಯಾಜ್ಯ ತೆಗೆಯುವ ಕೆಲಸ ನಡೆಯುತ್ತಿದೆ. ಅಪಾಯಕಾರಿ ರಾಜ ಕಾಲುವೆಗಳನ್ನು ಗುರುತು ಮಾಡಲಾಗಿದೆ. ಆದ್ಯತೆ ಮೇರೆಗೆ ಎಲ್ಲೆಲ್ಲಿ ಗಂಭೀರ ಸಮಸ್ಯೆ ಇದೆಯೋ ಅಲ್ಲಿ ಕಸ, ಕಡ್ಡಿ ತೆರವುಗೊಳಿಸುವ ಕೆಲಸ ಬಿರುಸಿನಿಂದ ನಡೆಯುತ್ತಿದೆ. ಆದಷ್ಟು ಬೇಗ ಕೆಲಸ ಪೂರ್ಣಗೊಳ್ಳಲಿದೆ ಎಂಬ ವಿಶ್ವಾಸ ಇದೆ. ಅಧಿಕಾರಿಗಳೂ ಸಹ ಈ ನಿಟ್ಟಿನಲ್ಲಿ ಗಂಭೀರವಾಗಿ ಪರಿಗಣಿಸಿದ್ದು, ಆಯುಕ್ತರು, ಮೇಯರ್ ಸ್ಥಳಕ್ಕೆ ಬಂದು ಪರಿಸ್ಥಿತಿ ಅವಲೋಕಿಸಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಎಂದು ಗಡಿಗುಡಾಳ್ ಮಂಜುನಾಥ್ ಹೇಳಿದರು.

## ಸಮಸ್ಯೆ ಪರಿಹರಿಸುವಲ್ಲಿ ಅಧಿಕಾರಿಗಳು ಕೈಜೋಡಿಸಬೇಕು : ಶಾಸಕಿ ಎಂ.ಪಿ. ಲತಾ

ಹರಪನಹಳ್ಳಿ, ಮೇ 25- ತಾಲ್ಲೂಕಿನಲ್ಲಿ ವಸತಿ ನಿಲಯಗಳಿಗೆ ಸ್ಥಳಾವಕಾಶದ ಕೊರತೆ, ಸಾರಿಗೆ ಸಮಸ್ಯೆ ಸೇರಿದಂತೆ, ಅನೇಕ ಜ್ವಲಂತ ಸಮಸ್ಯೆಗಳಿದ್ದು, ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕೈ ಜೋಡಿಸಬೇಕು ಎಂದು ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಕರೆ ನೀಡಿದರು.



ಪಟ್ಟಣದ ತಾಲ್ಲೂಕು ಪಂಚಾಯ್ತಿ ರಾಜೀವ್ ಗಾಂಧಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಇಂದು ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಗೌರವ ಸ್ವೀಕರಿಸಿ ಅವರು ಮಾತನಾಡಿದರು. ಬೇರೆ ಬೇರೆ ಕೆಲಸದ ನಿಮಿತ್ತ ತಮ್ಮ ಕಛೇರಿಗಳಿಗೆ ಬಂದಂತಹ ಸಾರ್ವಜನಿಕರಿಗೆ ಪ್ರೀತಿಯನ್ನು ತೋರಿಸಿ, ಅವರನ್ನು (3ನೇ ಪುಟಕ್ಕೆ)

## ಇನ್ನೆರಡು ಚೀತಾ ಮರಿಗಳ ಸಾವು

ಭೂಪಾಲ್, ಮೇ 25 - ಮಧ್ಯ ಪ್ರದೇಶದ ಕುನ್ಹೊ ರಾಷ್ಟ್ರೀಯ ಉದ್ಯಾನವನದಲ್ಲಿ ಎರಡು ಚೀತಾ ಮರಿಗಳು ಸಾವನ್ನಪ್ಪಿವೆ ಎಂದು ಅರಣ್ಯಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ಮೂರು ದಿನಗಳಲ್ಲಿ ಮೂರು ಚೀತಾ ಮರಿಗಳು ಸಾವನ್ನಪ್ಪಿವೆ. ಮೇ 23ರಂದು ಚಿರತೆ ಮರಿಯೊಂದು ಸಾವನ್ನಪ್ಪಿದೆ ಎಂದು ತಿಳಿಸಲಾಗಿತ್ತು. ಇನ್ನೆರಡು ಚೀತಾ ಮರಿಗಳು ಅಂದೇ ಸಾವನ್ನಪ್ಪಿವೆ. ಆದರೆ, ಆ ಬಗ್ಗೆ ಗುರುವಾರ ವರದಿ ನೀಡಲಾಗಿದೆ.

ಚೀತಾ ಮರಿಗಳ ಸಾವಿನ ಬಗ್ಗೆ ಅಂದೇ ವರದಿ ನೀಡದೇ ಇರುವುದಕ್ಕೆ ಕಾರಣವೇನು ಎಂಬುದನ್ನು ಅಧಿಕಾರಿಗಳು ಸ್ಪಷ್ಟಪಡಿಸಿಲ್ಲ. ಕಳೆದ ಮಾರ್ಚ್ ತಿಂಗಳಲ್ಲಿ ಜ್ವಾಲ ಎಂಬ ಚೀತಾ ನಾಲ್ಕು ಮರಿಗಳಿಗೆ ಜನ್ಮ ನೀಡಿತ್ತು. ಆ ಮರಿಗಳಲ್ಲಿ ಮೂರು ಈಗ ಸಾವನ್ನಪ್ಪಿವೆ. ಉದ್ಯಾನವನದಲ್ಲಿ ತಾಪಮಾನ 46-47 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ಈ ನಡುವೆ ಚಿರತೆ ಮರಿಗಳು ಅಸ್ವಸ್ಥವಾಗಿರುವುದು ಕಂಡು ಬಂತು. ಅವುಗಳನ್ನು ರಕ್ಷಿಸಲು ಚಿಕಿತ್ಸೆ ನೀಡಲಾಯಿತಾದರೂ, ಅವು ಸಾವನ್ನಪ್ಪಿವೆ.

## ಸಂಸತ್ ಕಟ್ಟಡ ರಾಷ್ಟ್ರಪತಿಯಿಂದ ಉದ್ಘಾಟನೆಯಾಗಲಿ

**ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲು**

ನವದೆಹಲಿ, ಮೇ 25 - ನೂತನ ಸಂಸತ್ ಕಟ್ಟಡದ ಉದ್ಘಾಟನಾ ಸಮಾರಂಭಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿ ಸಲಾಗಿದೆ.

ವಕೀಲ ಜಯ ಸುಕಿನ್ ಅವರು ಈ ಬಗ್ಗೆ ಅರ್ಜಿ (3ನೇ ಪುಟಕ್ಕೆ)

**ಶ್ರೀ ಬಿ.ಕೆ.ಆರ್.ಸ್ವಾಮಿ ಲಿಂಗೈಕ್ಯ**



ಬಿ.ಕೆ.ಆರ್.ಸ್ವಾಮಿ ಸೆಕ್ಯೂರಿಟಿ ಏಜೆನ್ಸೀಸ್, ಮ್ಯಾನ್ ಪವರ್ ಗ್ರೂಪ್ಸ್, ಮಾಲೀಕರು.
ಹರಿಹರ ನಗರದ ವಿಜಯನಗರ ಬಡಾವಣೆ, 2ನೇ ಮೇನ್,
8 ನೇ ಕ್ರಾಸ್, ನಿವಾಸಿ ಶ್ರೀ ಬಿ.ಕೆ.ಆರ್.ಸ್ವಾಮಿ (69) ಇವರು
ದಿನಾಂಕ: 25.05.2023 ರಂದು ಲಿಂಗೈಕ್ಯರಾಗಿದ್ದಾರೆಂದು ತಿಳಿಸಲು
ವಿಷಾದಿಸುತ್ತೇವೆ. ಮೃತರು ಧರ್ಮಪತ್ನಿ, ಓರ್ವ ಪುತ್ರ ಹಾಗೂ
ಅಪಾರ ಬಂಧು-ಬಳಗ ಮತ್ತು ಸಿಬ್ಬಂದಿ ವರ್ಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯು ಹರಿಹರದ ಹಿಂದೂ ರುದ್ರಭೂಮಿಯಲ್ಲಿ
ದಿನಾಂಕ: 26.05.2023 ರಂದು ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ.
ಇಂತಿ ದುಃಖತಪ್ತ ಕುಟುಂಬ ವರ್ಗ, ಕಬ್ಬಿಣಕಂತಿ ಮಠ ವಂಶಸ್ಥರು
ಹಾಗೂ ಸಿಬ್ಬಂದಿ ವರ್ಗ. ಮೊ: 9606179293
ಹರಿಹರದ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನದ ಸಮಯ:
ದಿ.25.5.2023 ರ ಸಂಜೆ 5 ರಿಂದ ದಿ.26.5.2023 ರ ಬೆಳಿಗ್ಗೆ 8 ಗಂಟೆಯವರೆಗೆ

**10ನೇ ವರ್ಷದ ಪುಣ್ಯಸ್ಮರಣೆ**



**ದಿ|| ಆರ್. ಜಗನ್ನಾಥ್**

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು ಕಳೆದಿವೆ.
ನಿಮ್ಮ ಆದರ್ಶ, ಕರುಣೆ, ಮಾರ್ಗದರ್ಶನ ನಮ್ಮ
ಹೃದಯಗಳಲ್ಲಿ ಹಚ್ಚಹಸಿರಾಗಿ ಉಳಿದಿದೆ.
ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತ ಸದಾ
ನಿಮ್ಮ ಸ್ಮರಣೆಯಲ್ಲಿರುವ
* ಶ್ರೀಮತಿ ಪುಷ್ಪಲತಾ ಜಗನ್ನಾಥ್,
ಮಾಜಿ ಮಹಾನಗರ ಪಾಲಿಕೆ ಸದಸ್ಯರು, ದಾವಣಗೆರೆ
* ಶ್ರೀಮತಿ ಭಾಗ್ಯ ಚಂದ್ರಶೇಖರ್ ಜಗನ್ನಾಥ್
* ಶ್ರೀಮತಿ ರೋಹಿಣಿ ಗಜೇಂದ್ರ ಜಗನ್ನಾಥ್
* ಶ್ರೀಮತಿ ಜಯಲಕ್ಷ್ಮಿ ವಿಜಯ ಟೇಟಾಂಬಿ
ಮೊಮ್ಮಕ್ಕಳು:
ಅನ್ವಿತಾ , ಜಗತ್, ವಿಹಾಲ್, ಪ್ರತೀಕ್ಷ, ನಿಧಿಶ್ರೀ,
ಗುಡದಪ್ಪ ವಂಶಸ್ಥರು ಹಾಗೂ ಬಂಧು-ಮಿತ್ರರು

**ಸಾಹುಕಾರ್ ಎನ್.ಆರ್. ತಿಪ್ಪೇರುದ್ರಮೂರ್ತಿ ನಿಧನ**



ಜಗಳೂರು ತಾಲ್ಲೂಕು ನಿಬಗೂರು ಗ್ರಾಮದ ವಾಸಿ
ದಿ. ಶ್ರೀಮತಿ ನಂಬಕ್ಕ ಮತ್ತು ರುದ್ರಪ್ಪನವರ ಪುತ್ರ
**ಎನ್.ಆರ್. ತಿಪ್ಪೇರುದ್ರಮೂರ್ತಿ**
ಇವರು ದಿನಾಂಕ 25.5.2023ರ ಗುರುವಾರ ಸಂಜೆ 6.55ಕ್ಕೆ ದೈವಾಧೀನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.5.2023ರ ಶುಕ್ರವಾರ ಮಧ್ಯಾಹ್ನ ಮೃತರ ಸ್ವಗ್ರಾಮವಾದ ಜಗಳೂರು ತಾಲ್ಲೂಕು ನಿಬಗೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
**ದುಃಖ ತಪ್ತ ಕುಟುಂಬ ವರ್ಗ, ಮೊ : 99003 89556**

# ಜ್ವರ, ಕಾಲುಬಾವಿನಿಂದ ಹನುಮನಹಳ್ಳಿಯ ಜನ ತತ್ತರ

ಸಾಸ್ವೆಹಳ್ಳಿ, ಮೇ 25- ಸಮೀಪದ ಹನುಮನಹಳ್ಳಿ ಗ್ರಾಮದಲ್ಲಿ ಕಳೆದ ಎರಡು ತಿಂಗಳಿನಿಂದ ವಿಪರೀತ ಜ್ವರ ಕಾಣಿಸಿಕೊಳ್ಳುತ್ತಿದೆ. ನಂತರ ಎರಡು ಕಾಲುಗಳು ಊದಿಕೊಳ್ಳುತ್ತವೆ, ಮೈಕೈ ನೋವು, ಸುಸ್ತು ಕಾಣಿಸಿಕೊಳ್ಳುತ್ತದೆ.

ನನಗೆ ಜ್ವರ ಬಂದು ಎರಡು ತಿಂಗಳು ಆಯ್ತು ಮಾತ್ರೆ ನುಂಗಿದಾಗ ಜ್ವರ ಇಲ್ಲ. ಎರಡು ತಿಂಗಳಿನಿಂದಲೂ ಕಾಲಿನ ಪಾದ, ಕೈ ಬೆರಳುಗಳಲ್ಲಿ ತುಂಬಾ ನೋವಿದೆ. ಕಾಲಿನಲ್ಲಿ ಬಾವು ಕಾಣಿಸಿಕೊಳ್ಳುತ್ತದೆ. ಗುಳಿಗೆಗಳನ್ನು ನುಂಗಿದರೆ ನೋವು ಇರುವುದಿಲ್ಲ. ಕೆಲಸ ಮಾಡಲು ಆಗುವುದಿಲ್ಲ. ತುಂಬಾ ಸುಸ್ತಾಗುತ್ತದೆ ಎನ್ನುತ್ತಾರೆ ಗ್ರಾಮದ ವಿಜಯ್ ಕುಮಾರ್.

ದಿನಾ ಎರಡು ಹೊತ್ತು ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದೇನೆ. ಒಂದು ಹೊತ್ತು ಮಾತ್ರೆ ತೆಗೆದುಕೊಳ್ಳದಿದ್ದರೆ ನೋವು ಜಾಸ್ತಿ ಆಗುತ್ತಿದೆ. ಕೂತರೆ ಏಳಲು ಆಗುವುದಿಲ್ಲ. ಕೆಳಗೆ ಕೂರಲು ಆಗುವುದಿಲ್ಲ. ಕೈಯಿಂದ ಕೆಲಸ ಮಾಡಲು ಆಗುತ್ತಿಲ್ಲ. ನಮ್ಮೂರಿಗೆ ಮಳೆ ಬೇರೆ ಸರಿಯಾಗಿ ಆಗಿಲ್ಲ. ತೋಟಕ್ಕೆ ನೀರು ಹಾಯಿಸುವುದು ಕಷ್ಟವಾಗಿದೆ ಎನ್ನುತ್ತಾರೆ ಅವರು.

ನಾವು ಕೂಲಿ ಕೆಲಸ ಮಾಡಿ ಜೀವನವನ್ನು ನಡೆಸು ತ್ತೇವೆ. ನಮ್ಮೂರಿಗೆ ಮಾತ್ರ ಈ ವಿಚಿತ್ರ ಕಾಯಿಲೆ ಕಾಣಿಸಿ ಕೊಂಡಿದೆ. ಮನೆಯಲ್ಲಿ ಒಬ್ಬರಾದ ಮೇಲೆ ಒಬ್ಬರಿಗೆ ಈ ಕಾಯಿಲೆ ಹರಡುತ್ತಿದೆ. ಕೂಲಿಯೂ ಇಲ್ಲದೆ, ಕಾಯಿಲೆಯ ಔಷಧಿಗೆ ಸಾವಿರಾರು ರೂಪಾಯಿ ಖರ್ಚು ಮಾಡಿದ್ದೇವೆ. ಡ್ರಿಪ್ ಹಾಕಿದರೆ ಮಾತ್ರ ಆರೋಗ್ಯವಂತರಾಗುತ್ತಿದ್ದೇವೆ ಎನ್ನುತ್ತಾರೆ ಚಂದ್ರಮ್ಮನವರು.

ನಮ್ಮ ಮನೆಯ ಸುತ್ತಮುತ್ತಲು ಸ್ವಚ್ಛವಾಗಿಟ್ಟುಕೊಂಡಿ ದ್ದೇವೆ. ವಾರದಲ್ಲಿ ಎರಡು, ಮೂರು ಸಲ ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳ ನೀರು ಬದಲಾಯಿಸುತ್ತಿದ್ದೇವೆ. ತಿಂಗಳ ಹಿಂದೆ ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯ ವರು ಬಂದು ರಕ್ತ ಪರೀಕ್ಷೆ ಮಾಡಿದರು. ನಂತರ ಏನು ಕ್ರಮ ತೆಗೆದುಕೊಂಡರೋ ಮಾಹಿತಿ ಇಲ್ಲ. ಮತ್ತೆ ಗ್ರಾಮದಲ್ಲಿ ಜ್ವರ ಹೆಚ್ಚಾಗುತ್ತಿದೆ. ಅಮ್ಮನ ಕಾಟ ಇರಬೇಕು ಎಂದು ಅಮ್ಮನ ಪೂಜೆಯನ್ನೂ ಮಾಡಲಾಯಿತು ಎನ್ನುತ್ತಾರೆ ಪ್ರೇಮ.

ಗ್ರಾಮದ 50 ಕ್ಕೂ ಹೆಚ್ಚು ಕುಟುಂಬಗಳಲ್ಲಿ ಈ ರೋಗ ಕಾಣಿಸಿಕೊಂಡಿದೆ. ಕಾಯಿಲೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹುಟ್ಟಿದ ಮಗುವಿನಿಂದ ಹಿಡಿದು ಸಾಯುವ ಮುದುಕರವರೆಗೂ ಈ ರೋಗಕ್ಕೆ ತುತ್ತಾದವರೇ ಹೆಚ್ಚಿನ ವರು ಇದ್ದಾರೆ. ಹೊನ್ನಾಳಿ ತಾಲ್ಲೂಕಿನ ಈ ಗ್ರಾಮದಲ್ಲಿ ಮಾತ್ರ ಈ ತರದ ಕಾಯಿಲೆ ಹೆಚ್ಚಾಗಿದೆ. ಅಮ್ಮನ ಕಾಟ ಇರಬೇಕು ಎಂದು ಗ್ರಾಮಸ್ಥರು ಅಮ್ಮನ ಪೂಜೆ ಮಾಡಿದ್ದಾರೆ. ಒಂದು ತಿಂಗಳ ಹಿಂದೆ ಕಡಿಮೆಯಾಗಿದ್ದ ಈ ಕಾಯಿಲೆ ಮತ್ತೆ ಕಾಣಿಸಿಕೊಂಡಿರುವುದು ಗ್ರಾಮಸ್ಥರನ್ನು ಆತಂಕಕ್ಕೆ ದೂಡಿದೆ.

ಸಾಸ್ವೆಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಮಂಜುನಾಥ್ ಕೆ.ಎಸ್. ಮಾತನಾಡಿ, ಮೇಲ್ನೋಟಕ್ಕೆ ಇದು ಚಿಕನ್ ಗುನ್ಯಾದ ಲಕ್ಷಣ ಇದೆ. ಇದೊಂದು ವೈರಲ್ ಫೀವರ್ ಆಗಿದೆ. ಸೊಳ್ಳೆಯಿಂದ ಈ ರೋಗ ಹರಡುತ್ತಿದೆ. ತಿಂಗಳ ಹಿಂದೆ ಹನುಮನಹಳ್ಳಿ ಗ್ರಾಮದಲ್ಲಿ ಮಾತ್ರ ಈ ಪ್ರಕರಣಗಳು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಶಾ ಕಾರ್ಯಕರ್ತರಿಂದ ಸರ್ವೆ ಮಾಡಿಸಿ, ರಕ್ತ ಪರೀಕ್ಷೆಗೆ ಕಳುಹಿಸಲಾಗಿದೆ ಎಂದರು.

ರಕ್ತದಲ್ಲಿ ಚಿಕನ್ ಗುನ್ಯದ ನೆಗೆಟಿವ್ ರಿಪೋರ್ಟ್ ಬಂದಿದೆ. ಒಂದರೆಡು ದಿನಗಳಿಂದ ಮತ್ತೆ ಆ ಗ್ರಾಮದಲ್ಲಿ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮತ್ತೆ ಶುಕ್ರವಾರದಿಂದ ಪುನಃ ಸರ್ವೆ ಮಾಡಿಸಲಾಗುವುದು. ರಕ್ತ ಸಂಗ್ರಹಿಸಿ ಪುನಃ ಪರೀಕ್ಷೆಗೆ ಕಳುಹಿಸಲಾಗುವುದು ಎಂದು ಹೇಳಿದರು. ಗ್ರಾಮದಲ್ಲಿ ಜನರು ಆತಂಕಕ್ಕೆ ಒಳಗಾಗದೆ ಸೊಳ್ಳೆಯಿಂದ ರಕ್ಷಿಸಿಕೊಳ್ಳಲು ಕ್ರಮವಹಿಸಲು, ಹೆಚ್ಚು ನೀರು ಕುಡಿಯಿರಿ, ಮನೆಯ ಸುತ್ತಮುತ್ತಲು ನೀರು ನಿಲ್ಲದಂತೆ ಮುಂಜಾಗ್ರತಾ ಕ್ರಮವಹಿಸಿ, ಸೊಳ್ಳೆ ಬತ್ತಿ, ಮಲಗುವಾಗ ಸೊಳ್ಳೆ ಪರದೆ ಬಳಸಲು ಸೂಚಿಸಲಾಗಿದೆ. ಜ್ವರ ಕಾಣಿಸಿಕೊಂಡ ತಕ್ಷಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ತಿಳಿಸಿದೆ ಎಂದರು.

# ದಾನ, ಧರ್ಮಗಳಿಂದ ಪುಣ್ಯ ಲಭಿಸುತ್ತದೆ



## ರಾಣೇಬೆನ್ನೂರಿನಲ್ಲಿ ತುಂಗಾಜಲ ಶ್ರೀ ಚೌಡೇಶ್ವರಿ ದೇವಸ್ಥಾನದ ಕಳಸಾರೋಹಣ

ರಾಣೇಬೆನ್ನೂರು, ಮೇ 25- ಮನುಷ್ಯರಿಗೆ ಎಷ್ಟೇ ಮಾನಸಿಕವಾಗಿ ಜಂಜಾಟಗಳು ಇದ್ದರೂ ತಮ್ಮ ಭಕ್ತಿ ಮೂಲಕ ದೇವರ ಪ್ರತಿಷ್ಠಾಪನೆ, ದೇವಸ್ಥಾನ ಹಾಗೂ ಗೋಪುರ ನಿರ್ಮಾಣ ಮಾಡುವ ಮೂಲಕ ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳುತ್ತಾರೆ ಎಂದು ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಇಲ್ಲಿನ ಮಾರುತಿ ನಗರದ ಶ್ರೀ ತುಂಗಾಜಲ ಚೌಡೇಶ್ವರಿ ದೇವಿ ದೇವಸ್ಥಾನದ ನೂತನ ಗೋಪುರದ ಕಳಸಾರೋಹಣ, ಧರ್ಮಸಭೆ ಹಾಗೂ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ದೇಶಕ್ಕೆ ಬರಗಾಲ ಬರಬಹುದು. ಆದರೆ, ನಮ್ಮ ದೇಶದಲ್ಲಿ ಭಕ್ತಿಗೆ ಬರಗಾಲವಿಲ್ಲ. ಅದನ್ನು ಎಲ್ಲಾ ಸಂದರ್ಭಗಳಲ್ಲೂ ನೋಡುತ್ತೇವೆ. ಏನೆಲ್ಲಾ ಕಷ್ಟಗಳು ಬಂದರೂ ಬದುಕನ್ನು ಹಸನುಗೊಳಿಸು ತ್ತಾರೆ. ಜೀವನದಲ್ಲಿ ಪುಣ್ಯ ಲಭಿಸಬೇಕಾದರೆ ದಾನ, ಧರ್ಮ ಮಾಡಬೇಕು. ಆಗ ಮಾತ್ರ ಜೀವನದಲ್ಲಿ ನೆಮ್ಮದಿ ಸಿಗುತ್ತದೆ ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಲಿಂಗನಾಯಕನಹಳ್ಳಿ ಶ್ರೀ ಚನ್ನವೀರ ಶಿವಯೋಗಿ ಸ್ವಾಮೀಜಿ ಮಾತನಾಡಿ, ಜೀವನದಲ್ಲಿ ಪುಣ್ಯದ ಕೆಲಸ ಮಾಡಬೇಕು. ನಮ್ಮ ಆಚಾರ, ವಿಚಾರ, ಸಂಸ್ಕೃತಿ, ಪರಂಪರೆ ಉಳಿಸುವ ಜತೆಗೆ ಮುಂದಿನ ಪೀಳಿಗೆಗೆ ಅದನ್ನು ಪರಿಚಯಿಸುವ ಕಾರ್ಯ ಪ್ರತಿಯೊಬ್ಬರಿಂದಲೂ ಆಗಬೇಕು. ಕೆಲವರು ಕುರ್ಚಿ ಪಡೆಯಲು ಹಣ ಹಂಚುತ್ತಾರೆ. ಮನುಷ್ಯನಿಗೆ ನಿಜವಾಗಿ ಬೇಕಾಗಿರುವುದು ಕುರ್ಚಿಯಲ್ಲ. ಶಾಂತಿ, ನೆಮ್ಮದಿಯ ಜೀವನ. ಅದು ದೊರೆಯುವುದು ದೇವಸ್ಥಾನ, ಮಠ-ಮಂದಿರಗಳಿಂದ. ಆದ್ದರಿಂದ ಪ್ರತಿಯೊಬ್ಬರೂ ದೇವಸ್ಥಾನ ಕಟ್ಟಿ ಬೆಳೆಸಬೇಕು. ಅಧ್ಯಾತ್ಮದ ಚಿಂತನೆಗೆ ಒಳಗಾಗಬೇಕು. ದುಡಿದ ಹಣದಲ್ಲಿ ಕೊಂಚವಾದರೂ ಒಳ್ಳೆಯ ಕಾರ್ಯಗಳಿಗೆ ದಾನ ಮಾಡಬೇಕು ಎಂದರು.

ಸ್ಥಳೀಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಪ್ರಕಾಶಾನಂದಜೀ ಮಹಾರಾಜ್ ಮಾತನಾಡಿ, ಭಗವಂತನನ್ನು ತಂದೆ-ತಾಯಿಗಳ ರೂಪದಲ್ಲಿ ಪೂಜಿಸುವುದು ಇದೆ. ಭಗವಂತ ತಾಯಿ ಎಂದು ತಿಳಿದುಕೊಂಡರೆ, ಅದೇ ಆ ಮನುಷ್ಯನನ್ನು ಎತ್ತರಕ್ಕೆ ಬೆಳೆಸಿ ನೆಮ್ಮದಿಯ ಜೀವನ ಕರುಣಿಸುತ್ತದೆ ಎಂದರು.

ತುಂಗಾಜಲ ಚೌಡೇಶ್ವರಿ ಸಮಿತಿ ಅಧ್ಯಕ್ಷ ಶೇಖಪ್ಪ ಹೊಸಗೌಡ್ರ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್ಕಾರದ ಯಾವುದೇ ಅನುದಾನ ಪಡೆಯದೇ ಭಕ್ತರ ಹಣದಿಂದ ಗೋಪುರ ನಿರ್ಮಾಣ ಮಾಡಲಾಗಿದೆ ಎಂದು ತಿಳಿಸಿದರು.

ಶನೈಶ್ಚರ ಹಿರೇಮಠದ ಶ್ರೀ ಶಿವಯೋಗಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು.

ಎಂ.ಎಸ್. ಅರಕೇರಿ, ಶಿಕಾರಿಪುರ ತಹಶೀಲ್ದಾರ್ ಜಿ. ಶಂಕರ್, ಎಲ್.ಎನ್. ಗುಂಡಗಟ್ಟಿ, ಶೇಖರಗೌಡ ಚೌಡಪ್ಪಳವರ, ಲಕ್ಷ್ಮಣ ಶೆಟ್ರು, ಎಸ್.ಆರ್. ಪಾಟೀಲ, ಪರಮೇಶಪ್ಪ ಗೂಳಣ್ಣನವರ, ಕರಬಸಪ್ಪ ಮಾಕನೂರ, ಬಸವರಾಜ ಐರಣಿ, ಬಸವರಾಜ ಗುಳೇದ, ಕರಿಬಸಪ್ಪ ಜಾಡರ, ಈರಪ್ಪ ಮುದಿಗೊಣ್ಣವರ, ಕುಮಾರ ಮಡಿವಾಳರ, ನಿಂಗಪ್ಪ ವಿಭೂತಿ, ಲಕ್ಷ್ಮಣ ಸಾಲಿ, ಏಕಾಂತ ಮುದಿಗೌಡರ, ವಿರುಪಾಕ್ಷಪ್ಪ ಮರಡಿ ಬಣಕಾರ, ದುರುಗಪ್ಪ ಹುಲುಗಮ್ಮನವರ, ಶಿವಪ್ಪ ಬೆನಕನಗೊಂಡ, ಪ್ರಮೋದ ಕೋಪರ್ಡೆ, ಪರಮೇಶಯ್ಯ ಮಠದ, ಶೇಖಪ್ಪ ನರಸಗೊಂಡರ ಸೇರಿದಂತೆ ಮತ್ತಿತರು ಇದ್ದರು.

## ವಾಲ್ಮೀಕಿ ಸಮಾಜದ ಅಧ್ಯಕ್ಷ ಸ್ಥಾನಕ್ಕೆ ರಂಗಣ್ಣ ರಾಜೀನಾಮೆ



ಹೊನ್ನಾಳಿ

ಹೊನ್ನಾಳಿ, ಮೇ 25- ತಾಲ್ಲೂಕಿನ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಸ್ಥಾನಕ್ಕೆ ಇಂದು ರಾಜೀನಾಮೆ ಸಲ್ಲಿಸುತ್ತಿರುವುದಾಗಿ ಅಧ್ಯಕ್ಷ ಕುಳಗಟ್ಟೆ ಕೆ.ಎಲ್.ರಂಗಣ್ಣ ಹೇಳಿದರು.

ತಮ್ಮ ಅವಧಿಯಲ್ಲಿ 1 ಕೋಟಿ ರೂ. ಸರ್ಕಾರದ ಅನುದಾನ ತಂದು ಸುಂಕದಕಟ್ಟೆ ರಸ್ತೆಯಲ್ಲಿರುವ ವಾಲ್ಮೀಕಿ ಸಮುದಾಯ ಭವನದ ಅಭಿವೃದ್ಧಿ ಕಾರ್ಯವನ್ನು ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ಅಲೆಮಾರಿಗಳ ಸಮಸ್ಯೆ ಆಲಿಸಿದ ಜಿಲ್ಲಾಧಿಕಾರಿ

**(1ನೇ ಪುಟದಿಂದ)** ಕೆಲಸ ಮಾಡಲು ಬಂದು ತಾತ್ಕಾಲಿಕ ಟೆಂಟ್‌ನಲ್ಲಿ ನೆಲೆಸಿದ್ದಾರೆ. ಸೊಲ್ಲಾಪುರದಿಂದ ಕೆಲವು ಕುಟುಂಬಗಳು ಬಂದಿದ್ದು, ಇವರು ಖಾಲಿ ಬಾಟಲಿಗಳನ್ನು ಸಂಗ್ರಹಿಸಿ ಸೊಲ್ಲಾಪುರಕ್ಕೆ ಕಳುಹಿಸುವ ಕೆಲಸ ಮಾಡುತ್ತಿದ್ದಾರೆ ಮತ್ತು ಚನ್ನಗಿರಿ ತಾಲ್ಲೂಕಿನ ಅಲ್ತಾಪನಹಳ್ಳಿಯ ಹಕ್ಕಿಪಿಕ್ಕಿ ಜನರು ಇಲ್ಲಿ ತಾತ್ಕಾಲಿಕ ಟೆಂಟ್ ನಿರ್ಮಿಸಿಕೊಂಡು ವಿವಿಧ ಉದ್ಯೋಗ ಮಾಡಿ ಇಲ್ಲಿ ವಾಸಿಸುತ್ತಿದ್ದಾರೆ.

ಈ ಕುಟುಂಬಗಳಲ್ಲಿ ಇರುವ ಚಿಕ್ಕ ಮಕ್ಕಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪೌಷ್ಠಿಕ ಆಹಾರ ವಿತರಣೆಯನ್ನು ಮಾಡಲು ತಿಳಿಸಿ, ಹಕ್ಕಿಪಿಕ್ಕಿ ಜನರು ಜಿಲ್ಲೆಯವರಾಗಿದ್ದು, ಇವರಿಗೆ ಅಭಿವೃದ್ದಿ ನಿಗಮದ ಮೂಲಕ ಸ್ವ- ಉದ್ಯೋಗಕ್ಕೆ ಸಾಲ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು.

ಇಲ್ಲಿ ವಾಸಿಸುತ್ತಿರುವ ಎಲ್ಲರೂ ಆದಷ್ಟು ಬೇಗ ನಿಮ್ಮ ಗ್ರಾಮಗಳಿಗೆ ತಲುಪಿ, ಅಲ್ಲಿಯೇ ವಿವಿಧ ಉದ್ಯೋಗ ಮಾಡಲು ತಿಳಿಸಿ ಸ್ವ-ಉದ್ಯೋಗ ಕೈಗೊಳ್ಳಲು ಸರ್ಕಾರದ ವಿವಿಧ ಸೌಲಭ್ಯಗಳನ್ನು ಬಳಕೆ ಮಾಡಲು ತಿಳಿಸಿ, ಏನಾದರೂ ತೊಂದರೆಯಾದಲ್ಲಿ ಜಿಲ್ಲಾ ಆಡಳಿತದ ಗಮನಕ್ಕೆ ತನ್ನಿರಿ, ಜಿಲ್ಲಾ ಆಡಳಿತ ತಮ್ಮ ಸಹಾಯಕ್ಕೆ ಸದಾ ಸಿದ್ದವಿದೆ ಎಂದು ಅವರಲ್ಲಿ ಭರವಸೆ ಮೂಡಿಸಿದರು.

ಈ ವೇಳೆ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಮೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್ ಉಪಸ್ಥಿತರಿದ್ದರು.

# ಎಸ್ಸೆಸ್, ಎಸ್ಸೆಸ್ಸೆಂಗೆ ಸಚಿವ ಸ್ಥಾನ ನೀಡಬೇಕು



## ಹರಿಹರದ ಮಾಜಿ ಶಾಸಕ ಎಸ್. ರಾಮಪ್ಪ ಒತ್ತಾಯ

ಹರಿಹರ, ಮೇ 25 - ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆಯನ್ನು ಕೊಟ್ಟಿರುವ ಶಾಸಕರಾದ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಸಚಿವ ಸ್ಥಾನವನ್ನು ಆದಷ್ಟು ಬೇಗನೆ ನೀಡುವಂತೆ ಮಾಜಿ ಶಾಸಕ ಎಸ್. ರಾಮಪ್ಪ ಅವರು ಪಕ್ಷದ ವರಿಷ್ಠರನ್ನು ಒತ್ತಾಯಿಸಿದರು.

ನಗರದ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ದಾವಣಗೆರೆ ಜಿಲ್ಲೆಯನ್ನು ಉತ್ತುಂಗದತ್ತ ತೆಗೆದುಕೊಂಡು ಹೋಗುವಲ್ಲಿ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಾಕಷ್ಟು ಶ್ರಮಿಸಿದ್ದಾರೆ. ಇವರಿಗೆ ಪಕ್ಷದ ಹೈಕಮಾಂಡ್ ಮತ್ತೊಮ್ಮೆ ಸಚಿವ ಸ್ಥಾನ ಕೊಟ್ಟರೆ ಉತ್ತಮ ಆಡಳಿತ ಕೊಡುತ್ತಾರೆ. ಇವರನ್ನು ಸಂಪು ಟಕ್ಕೆ ಸೇರಿಸಿಕೊಳ್ಳುವಂತೆ ಹರಿಹರ ತಾಲ್ಲೂಕು ಕಾಂಗ್ರೆಸ್ ವತಿಯಿಂದ ಒತ್ತಾಯಿಸುವುದಾಗಿ ಅವರು ಹೇಳಿದರು.

ರಾಜೀವ್ ಗಾಂಧಿಯವರ ಪುಣ್ಯ ಸ್ಮರಣೆ ದಿನದಂದು ಕಾಂಗ್ರೆಸ್ ಪಕ್ಷದ ವತಿಯಿಂದ ವಿಜಯೋತ್ಸವ ಆಚರಣೆ ಮಾಡಿದ್ದು ಸರಿಯಲ್ಲ. ನಂದಿಗಾವಿ ಶ್ರೀನಿವಾಸ್ ಅವರು ವಿಜಯೋತ್ಸವ ಮಾಡಬಾರದಾಗಿತ್ತು ಎಂದರು.

ಶಾಸಕ ಬಿ.ಪಿ. ಹರೀಶ್ ಅವರು ದಲಿತರಿಗೆ ನೋವಾಗುವಂತೆ ಮಾತನಾಡಿದ್ದು ಸರಿಯಲ್ಲ. ಅವರು ಅವತ್ತಿನಿಂದ ಕ್ಷೇತ್ರದಲ್ಲಿ ಕಾಣಿಸಿಕೊಂಡಿಲ್ಲ. ದರ್ಗಾ ಮುಂದಿನ ರಸ್ತೆ ಜೊತೆಗೆ ಕ್ಷೇತ್ರದ ಹಲವಾರು ಅಭಿವೃದ್ಧಿ ಕಾರ್ಯಗಳ ವಿಚಾರಕ್ಕೆ ಸಂಬಂಧಿ ಸಿದಂತೆ ಅವರು ಅಡ್ಡಿಪಡಿಸಿದ್ದರು ಎಂದು ರಾಮಪ್ಪ ಇದೇ ಸಂದರ್ಭದಲ್ಲಿ ಟೀಕಿಸಿದರು.

ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಮಾತನಾಡಿ, ಮೊದಲ ಹಂತದ ಸಚಿವ ಸಂಪುಟದಲ್ಲಿ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಸಚಿವ ಸ್ಥಾನವನ್ನು ಕೊಡಬೇಕಿತ್ತು ಎಂದರು.

ಕೆ.ಪಿ.ಸಿ.ಸಿ. ಸದಸ್ಯ ಬಿ. ರೇವಣಸಿದ್ದಪ್ಪ ಮಾತನಾಡಿ, ವಿಧಾನಸಭೆ ಇತಿಹಾಸದಲ್ಲಿ ಅಲ್ಪಸಂಖ್ಯಾತರು ಸಭಾಧ್ಯಕ್ಷರಾಗಿ ಆಯ್ಕೆಯಾಗಿರಲಿಲ್ಲ. ಈ ಬಾರಿ ಕಾಂಗ್ರೆಸ್ ಪಕ್ಷವು ಯು.ಟಿ. ಖಾದರ್ ಅವರನ್ನು ಆಯ್ಕೆ ಮಾಡಿದ್ದು ರಾಜ್ಯದ ಎಲ್ಲಾ ವರ್ಗದವರಿಗೆ ಸಂತಸವನ್ನು ತರಿಸಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ ವಕೀಲರು, ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ್ ಪಾಟೀಲ್, ಮಲೇಬೆನ್ನೂರು, ಜಿಗಳಿ ಆನಂದಪ್ಪ, ಸನಾವುಲ್ಲಾ, ಸಿ.ಎನ್ ಹುಲುಗೇಶ್, ಬಾಲರಾಜ್, ಜಿ.ವಿ. ವೀರೇಶ್, ಅರ್ಜುನ ಸಾ ಪವಾರ್, ಅಶೋಕ ಮಾಸ್ಟರ್, ಹಂಚಿನ ನಾಗಪ್ಪ, ಭಾಗ್ಯಮ್ಮ, ನಾಗಮ್ಮ, ಸರಸ್ವತಿ ಇತರರು ಹಾಜರಿದ್ದರು.

## ಸಮಾರಂಭಕ್ಕೆ ದೇವೇಗೌಡರು

**(1ನೇ ಪುಟದಿಂದ)** ಪ್ರಧಾನಮಂತ್ರಿಯಾಗಿ, ದೇಶದ ಪ್ರಜೆಯಾಗಿ ಭಾಗಿಯಾಗುತ್ತಿದ್ದೇನೆ ಎಂದು ಅವರು ಸ್ಪಷ್ಟಪಡಿಸಿದರು.

ಎಲ್ಲ ವಿಚಾರಗಳಲ್ಲಿ ರಾಜಕೀಯ ಮಾಡಬಾರದು. ಬಿಜೆಪಿಯನ್ನು ರಾಜಕೀಯವಾಗಿ ವಿರೋಧ ಮಾಡಲಿಕ್ಕೆ ನನ್ನಲ್ಲಿ ಅನೇಕ ಕಾರಣಗಳಿವೆ. ಆದರೆ, ಸಂಸತ್ ಭವನ ಉದ್ಘಾಟನೆ ವಿಷಯದಲ್ಲಿ ರಾಜಕೀಯ ಮಾಡುವುದು ನನಗೆ ಇಷ್ಟವಿಲ್ಲ ಎಂದು ಗೌಡರು ಹೇಳಿದ್ದಾರೆ.

ನಾನು ಸಂಸತ್ತಿನ ಎರಡೂ ಸದನಗಳಿಗೆ ಆಯ್ಕೆಯಾಗಿದ್ದೇನೆ. ಅಲ್ಲಿ ಸಾಂವಿಧಾನಿಕ ಚೌಕಟ್ಟಿನಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ, ಈಗಲೂ ಸದಸ್ಯನಾಗಿದ್ದೇನೆ. ಸಂವಿಧಾನದ ಮೌಲ್ಯಗಳನ್ನು ಕಾಪಾಡುವ ಕೆಲಸ ಮಾಡಿದ್ದೇನೆ. ಹೀಗಾಗಿ ಸಂವಿಧಾನದ ವಿಷಯದಲ್ಲಿ ನಾನು ರಾಜಕೀಯ ಮಾಡಲಾರೆ ಎಂದರು. ಅನೇಕ ಪಕ್ಷಗಳು ಸಂಸತ್ ಭವನದ ಉದ್ಘಾಟನೆ ಕಾರ್ಯಕ್ರಮವನ್ನು ಬಹಿಷ್ಕರಿಸಿವೆ.


ಓರ್ವ ಮಾಜಿ ಪ್ರಧಾನಿಯಾಗಿ ನೀವು ಹೋಗುತ್ತೀರಾ? ಇಲ್ಲವಾ? ಎಂದು ಅನೇಕರು ಪ್ರಶ್ನೆ ಮಾಡಿದ್ದಾರೆ. ಹೌದು, ನಾನು ಸಂವಿಧಾನಕ್ಕೆ ಬದ್ಧನಾಗಿದ್ದೇನೆ. ಅದಕ್ಕಾಗಿ ಸಂಸತ್ ಭವನ ಉದ್ಘಾಟನೆಗೆ ಹೋಗುತ್ತೇನೆ ಎಂದು ಪ್ರಶ್ನೆ ಮಾಡಿದವರಿಗೆ ಉತ್ತರ ನೀಡಿದರು.

ಇದುವರೆಗೂ 21 ಪಕ್ಷಗಳು ಸಂಸತ್ ಭವನದ ಉದ್ಘಾಟನಾ ಕಾರ್ಯಕ್ರಮಕ್ಕೆ ಬಹಿಷ್ಕಾರ ಹಾಕುವುದಾಗಿ ತಿಳಿಸಿವೆ.

## 20 ಸಾವಿರ ಕೋಟಿ ಕಾಮಗಾರಿ ರದ್ದು

**(1ನೇ ಪುಟದಿಂದ)** ಸ್ಥಗಿತಗೊಳಿಸಲಾಗುವುದು ಹಾಗೂ ಈಗಾಗಲೇ ಕರೆದಿರುವ ಟೆಂಡರ್‌ಗಳನ್ನು ಸ್ಥಗಿತಗೊಳಿಸಲು ಮುಖ್ಯಮಂತ್ರಿಯವರು ಆದೇಶಿಸಿದ್ದಾರೆ.

## ಮಲೇಬೆನ್ನೂರು ಸಮೀಪದಲ್ಲಿ ಟ್ರ್ಯಾಕ್ಟರ್ ಪಲ್ಟಿ



ಮಲೇಬೆನ್ನೂರು, ಮೇ 25- ಹರಳಹಳ್ಳಿ ಗ್ರಾ.ಪಂ. ವ್ಯಾಪ್ತಿಗೆ ಬರುವ ಸಂಕ್ಲೀಪುರದಿಂದ ಕೆಂಗಲಹಳ್ಳಿಗೆ ಹೋಗುವ ರಸ್ತೆ ತುಂಬಾ ಹದಗೆಟ್ಟಿದ್ದು, ವಾಹನ ಸವಾರರು ಹಿಡಿ ಶಾಪ ಹಾಕುವಂತಾಗಿದೆ. ಗುರುವಾರ ಈ ರಸ್ತೆಯಲ್ಲಿ ಭತ್ತದ ಚೀಲ ಲೋಡ್ ಮಾಡಿಕೊಂಡು ಹೋಗುತ್ತಿದ್ದ ಟ್ರ್ಯಾಕ್ಟರ್ ರಸ್ತೆಯಲ್ಲಿನ ಗುಂಡಿಗಳಿಂದಾಗಿ ಪಲ್ಟಿಯಾಗಿದೆ. ಅದೃಷ್ಟವಶಾತ್ ಪ್ರಾಣ ಹಾನಿಯಾಗಿಲ್ಲ. ಆದರೆ ಅನೇಕ ವರ್ಷಗಳಿಂದ ಅಭಿವೃದ್ಧಿ ಕಾಣದ ಸಂಕ್ಲೀಪುರ-ಕೆಂಗಲಹಳ್ಳಿ ರಸ್ತೆ ದುರಸ್ತಿಗಾಗಿ ಎರಡೂ ಗ್ರಾಮಗಳ ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಹರಿಹರ : ನನ್ನ ಲೈಫ್, ನನ್ನ ಸ್ವಚ್ಛ ನಗರ ಅಭಿಯಾನ



ಹರಿಹರ, ಮೇ 25 - ನಗರದ ನಗರಸಭೆ ವತಿಯಿಂದ ನನ್ನ ಲೈಫ್, ನನ್ನ ಸ್ವಚ್ಛ ನಗರ ಎಂಬ ಅಭಿಯಾನವನ್ನು ಆರಂಭಿಸಲಾಗಿದೆ. ಈ ಅಭಿಯಾನದಡಿ ಮರು ಬಳಕೆ ತ್ಯಾಜ್ಯವನ್ನು ಸಂಗ್ರಹಿಸಲಾಗುವುದು. ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಅಭಿಯಾನದ ಮೂಲಕ ಜೂನ್ 5 ರವರೆಗೆ ಸಾರ್ವಜನಿಕರು ತಮ್ಮಮನೆಯಿಂದ ಉತ್ಪಾದನೆ ಆಗುವಂತಹ ಪ್ಲಾಸ್ಟಿಕ್, ಪುಸ್ತಕಗಳು ಮತ್ತು ದಿನಪತ್ರಿಕೆಗಳು, ಮಕ್ಕಳ ಆಟಿಕೆ ಸಾಮಾನುಗಳು ಮತ್ತಿತರೆ ಮರು ಬಳಕೆ ತ್ಯಾಜ್ಯವನ್ನು ನಿಗದಿತ ಕೇಂದ್ರಗಳಿಗೆ ತಂದು ಕೊಡಬಹುದಾಗಿದೆ.

ಈ ಸಂದರ್ಭದಲ್ಲಿ ದಾದಾಪೀರ್, ಪೌರಾಯುಕ್ತ ಬಸವರಾಜ್ ಐಗೂರು, ಕಾರ್ಯಪಾಲಕ ಅಭಿಯಂತರ ವಿನಯ್, ಹಿರಿಯ ಆರೋಗ್ಯ ನಿರೀಕ್ಷಕರಾದ ರವಿಪ್ರಕಾಶ್, ಗುರುಪ್ರಸಾದ್, ಕಚೇರಿ ವ್ಯವಸ್ಥಾಪಕ ಶಿವಕುಮಾರ್ ಇಂಜಿನಿಯರ್‌ಗಳಾದ ಹಮಿದ್, ರಂಗಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

# 7 ಮೋಟಾರ್ ಬೈಕ್‌ಗಳ ವಶ : ಮೂವರ ಬಂಧನ



ದಾವಣಗೆರೆ, ಮೇ 25- ವಿವಿಧೆಡೆ ಕಳ್ಳತನ ಮಾಡಲಾಗಿದ್ದ ಸುಮಾರು 3 ಲಕ್ಷ ರೂ. ಮೌಲ್ಯದ ಏಳು ಬೈಕುಗಳನ್ನು ವಶಪಡಿಸಿಕೊಂಡಿರುವ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಸ್ಥಳೀಯ ಸರಸ್ವತಿ ನಗರದ ರಾಕೇಶ್ ಕೆ. ಎಲ್. (19) ಹಾಗೂ ಇಬ್ಬರು ಕಾನೂನು ಸಂಘರ್ಷಕ್ಕೊಳಗಾದ ಬಾಲಕರನ್ನು ಪೊಲೀಸರು ಬಂಧಿಸಿದ್ದಾರೆ.

ಸುನಿಲ್ ಕುಮಾರ್ ಎಂಬಾತ ಮೊನ್ನೆ ತನ್ನ ಯಮಹಾ ಬೈಕ್ ಕಳ್ಳತನವಾಗಿರುವುದಾಗಿ ಕೆಟಿಜೆ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ತನಿಖೆ ನಡೆಸಿದ ಪೊಲೀಸರ ತಂಡ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಇವರು ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಬೈಕ್ ಕಳ್ಳತನ ಮಾಡಿರುವುದು ತಿಳಿದು ಬಂದಿದೆ.

ಕೆಟಿಜೆ ನಗರ, ವಿದ್ಯಾನಗರ, ಮಲೇಬೆನ್ನೂರು ಪೊಲೀಸ್ ಠಾಣೆ, ಹದಡಿ ಪೊಲೀಸ್ ಠಾಣೆಯಲ್ಲಿ ತಲಾ ಒಂದು ಕಳ್ಳತನ ಹಾಗೂ ಚನ್ನಗಿರಿ ಠಾಣೆಯಲ್ಲಿ 3 ಬೈಕ್ ಕಳ್ಳತನ ಮಾಡಿರುವುದಾಗಿ ತಿಳಿದು ಬಂದಿದೆ.


॥ ಶ್ರೀ ಶಿವನಾರದಮುನಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 10.12.1956

ಮರಣ : 19.05.2023

ದಾವಣಗೆರೆ ಜಿಲ್ಲೆ, ಎಸ್.ಎಸ್. ಬಡಾವಣೆ ಎ ಬ್ಲಾಕ್ ವಾಸಿಯಾದ

**ಎಸ್.ಜಿ. ರೇಣುಕಾ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.**

ದಿನಾಂಕ : 19.05.2023ನೇ ಶುಕ್ರವಾರ ಬೆಳಿಗ್ಗೆ 6ಕ್ಕೆ ನಮ್ಮ ಪೂಜ್ಯ ಪತಿಯವರಾದ

**ಶ್ರೀ ಎ.ಎನ್. ಕೆಂಚನಾರಪ್ಪ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ : 27.05.2023ನೇ ಶನಿವಾರ ಬೆಳಿಗ್ಗೆ 11ಕ್ಕೆ **ದಾವಣಗೆರೆ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಮಕ್ಕಳು, ಸಹೋದರರು, ಅಳಿಯಂದಿರು, ಮೊಮ್ಮಕ್ಕಳು, ಅಂಬುಕಟ್ಟೆ ವಂಶಸ್ಥರು ಶಿವಗಂಗಾ, ಶಾಮನೂರು ಗೌಡ್ರ ವಂಶಸ್ಥರು ಹಾಗೂ ಬಂಧು-ಮಿತ್ರರು.**

**96636 66150**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ಹರಿಹರದ ಬಸಪ್ಪ ಮಾಗಿ ನಿಧನ



ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, 4ನೇ ಮೇನ್, 10ನೇ ಕ್ರಾಸ್ ವಾಸಿ ಹರಿಹರದ ದಿ. ಗೋಣೆಪ್ಪ ಮಾಗಿ ಇವರ ಪುತ್ರ

**ಬಸಪ್ಪ ಮಾಗಿ (82)**

ಇವರು ದಿನಾಂಕ 25.5.2023ರ ಗುರುವಾರ ರಾತ್ರಿ 10.35ಕ್ಕೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.5.2023ರ ಶುಕ್ರವಾರ ಮಧ್ಯಾಹ್ನ 12ಕ್ಕೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖ ತಪ್ತ ಕುಟುಂಬ ವರ್ಗ, ಮೊ : 97381 16071, 78929 42381**



## ಗುಮ್ಮನೂರು ಗೌಡ್ರ ನಾಗರತ್ನಮ್ಮ ನಿಧನ



ದಾವಣಗೆರೆ ತಾಲ್ಲೂಕು ಗುಮ್ಮನೂರು ಗ್ರಾಮದ ವಾಸಿ **ಶ್ರೀ ಗೌಡ್ರ ನಾಗರಾಜಪ್ಪ** ಅವರ ಧರ್ಮಪತ್ನಿ

**ಗೌಡ್ರ ನಾಗರತ್ನಮ್ಮ**

ಅವರು ದಿನಾಂಕ 25.05.2023ರ ಗುರುವಾರ ರಾತ್ರಿ 9.30ಕ್ಕೆ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 73 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ನಾಲ್ವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನ ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26.05.2023ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ಗುಮ್ಮನೂರು ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ. 99804 26420, 80735 32732**


## ಬಾತಿ ಬಳಿಯ ಅಪಘಾತ: ಸಾವು

ದಾವಣಗೆರೆ, ಮೇ 25- ದೊಡ್ಡಬಾತಿಯ ಹಾಲಿನ ಡೈರಿ ಬಳಿ ಮೊನ್ನೆ ದಿನಾಂಕ 22ರಂದು ನಡೆದ ರಸ್ತೆ ಅಪಘಾತದಲ್ಲಿ ಸುಮಾರು 45 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯೋರ್ವ ಮೃತಪಟ್ಟಿದ್ದಾನೆ.

ಪಾದಚಾರಿ ಈ ವ್ಯಕ್ತಿಗೆ ಮೋಟಾರ್ ಬೈಕ್‌ನಲ್ಲಿ ಚಲಿಸುತ್ತಿದ್ದ ಶಾಂತಕುಮಾರ್ ಡಿಕ್ಕಿ ಹೊಡೆದ ಪರಿಣಾಮ ಅಪರಿಚಿತನು ಸಾವಿಗೀಡಾಗಿದ್ದಾನೆ.

ತೆಳ್ಳನೆಯ ಮೈಕಟ್ಟು ಹೊಂದಿರುತ್ತಾನೆ. ಮೃತ ವ್ಯಕ್ತಿಯು ನೀಲಿ ಮತ್ತು ಕಪ್ಪು ಚೌಕಳಿ ಶರ್ಟ್, ಗೋಲ್ಡ್ ಕಲರ್ ಪ್ಯಾಂಟ್, ನೀಲಿ ನಿಕ್ಕರ್ ಧರಿಸಿರುತ್ತಾನೆ. ಮೃತನ ಎರಡೂ ಕೈಯಲ್ಲಿ ಹಚ್ಚೆ ಗುರುತು ಇರುತ್ತದೆ. ಸಂಬಂಧಪಟ್ಟವರು ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಜನಪರ ಕಾಳಜಿಯ ಸಂಶೋಧನೆ ಅಗತ್ಯ

## ಪ್ರೊ. ಬಿಸ್ವಾಲ್



ದಾವಣಗೆರೆ, ಮೇ 25- ವಾಸ್ತವಿಕ ನೆಲೆಯಲ್ಲಿ ನಿಂತು, ವೈಜ್ಞಾನಿಕ ಆಲೋಚನೆಗಳೊಂದಿಗೆ ಜನಪರ ಕಾಳಜಿಯ ಸಂಶೋಧನೆಗಳು ಇಂದಿನ ಅಗತ್ಯವಾಗಿವೆ. ಸಂಶೋಧನೆಯು ಜೀವನದ ಭಾಗವಾದಾಗ ಗುಣಮಟ್ಟದ ಫಲಿತಾಂಶವನ್ನು ನೀಡಲು ಸಾಧ್ಯ ಎಂದು ಹರಿಹರದ ಕಿರ್ಲೋಸ್ಕರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕ ಪ್ರೊ. ಬಿಪ್ಲಬ್ ಕುಮಾರ್ ಬಿಸ್ವಾಲ್ ಅಭಿಪ್ರಾಯಪಟ್ಟರು.

ಐಸಿಎಸ್‌ಎಸ್‌ಆರ್ ದಕ್ಷಿಣ ಪ್ರಾದೇಶಿಕ ಕೇಂದ್ರ ತೆಲಂಗಾಣ, ದಾವಣಗೆರೆ ವಿಶ್ವವಿದ್ಯಾನಿಲಯ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಕಿರ್ಲೋಸ್ಕರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಜಂಟಿ ಆಶ್ರಯದಲ್ಲಿ ಬುಧವಾರ ಆರಂಭವಾದ ಸಮಾಜ ವಿಜ್ಞಾನದಲ್ಲಿ ಸಂಶೋಧನಾ ವಿಧಾನ ಕುರಿತು ಏಳು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪದವಿಗಾಗಿ ಸಂಶೋಧನೆ ಕೈಗೊಳ್ಳುವುದರಲ್ಲಿ ಯಾವುದೇ ಮೌಲ್ಯಗಳಿಲ್ಲ. ಸಮಾಜದ ಹಿತಕ್ಕಾಗಿ, ದೇಶದ ಉನ್ನತ ಭವಿಷ್ಯಕ್ಕಾಗಿ ಪ್ರಾಮಾಣಿಕವಾಗಿ ಸಂಶೋಧನೆ ಕೈಗೊಳ್ಳಬೇಕು. ಮೌಲ್ಯಯುತ ಸಂಶೋಧನೆಗಳಿಗೆ ಮಾತ್ರ ಮನ್ನಣೆ ಇದೆ ಎಂದು ನುಡಿದರು. ಆದ್ದರಿಂದ ವಿದ್ಯಾರ್ಥಿಗಳು ಸಂಶೋಧನೆಯಲ್ಲಿ ಯಾವುದೇ ರೀತಿಯ ರಾಜೀ ಸೂತ್ರ ಅನುಸರಿಸಬಾರದು ಎಂದರು.

ಸಮಾಜ ವಿಜ್ಞಾನದ ಸಂಶೋಧನೆಗೆ ಜಾಗತಿಕ ಮಟ್ಟದಲ್ಲಿ ಭಾರೀ ಮನ್ನಣೆ ಇದೆ. ಸಮಾಜದ ಪ್ರತಿಯೊಂದು ಅಭಿವೃದ್ಧಿಗೂ ಸಂಶೋಧನೆ ಆಧಾರಿತ ಅಂಕಿ-ಅಂಶಗಳ ದಾಖಲೆಗಳೇ ಮುಖ್ಯವಾಗಿವೆ. ವೈಜ್ಞಾನಿಕ ರೀತಿಯಲ್ಲಿ ಸಂಶೋಧನೆ ಕೈಗೊಂಡು, ದೇಶದ ಬೆಳವಣಿಗೆಗೆ ಪೂರಕವಾದ ಮಾರ್ಗದರ್ಶನ ನೀಡಬೇಕು ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಬಿ.ಡಿ.ಕುಂಬಾರ ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳಲ್ಲಿ ಕಲಿಯುವ ಆಸಕ್ತಿ ಮತ್ತು ಹೊಸತನ್ನು ಕಂಡುಕೊಳ್ಳುವ ಕುತೂಹಲ ಅತ್ಯವಶ್ಯ. ವಿಜ್ಞಾನ ಮತ್ತು ತಂತ್ರಜ್ಞಾನಗಳಷ್ಟೇ ಸಮಾಜ ವಿಜ್ಞಾನದ ಸಂಶೋಧನೆಗಳಿಗೂ ಮನ್ನಣೆ ಇದೆ. ಆದರೆ, ಅದಕ್ಕೆ ತಕ್ಕಂತೆ ಗುಣಮಟ್ಟವೂ ಮುಖ್ಯವಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ನಿಷ್ಠೆ, ಶ್ರದ್ಧೆ ಮತ್ತು ಪ್ರಾಮಾಣಿಕವಾಗಿ ಸಂಶೋಧನಾ ಕಾರ್ಯವನ್ನು ನಿರ್ವಹಿಸಬೇಕು. ಪದವಿಗಾಗಿ ನಡೆಸುವ ಸಂಶೋಧನೆಗಿಂತ ಉತ್ತಮ ಭವಿಷ್ಯಕ್ಕಾಗಿ ಕೈಗೊಳ್ಳುವ ಸಂಶೋಧನೆಗಳಿಗೆ ಬೇಡಿಕೆ ಹೆಚ್ಚಾಗಿದೆ. ವೈಯಕ್ತಿಕ ಹಿತಾಸಕ್ತಿಗಳನ್ನು ಬದಿಗಿಟ್ಟು, ಮೌಲ್ಯಯುತ ಶೋಧನೆಗಳಿಗೆ ಗಮನ ನೀಡಬೇಕು. ಯಾವುದೇ ಮೂಲದಿಂದ ಮಾಹಿತಿ ಪಡೆದರೂ ಅದರ ಮೂಲ ಸಂಶೋಧಕರ ಹೆಸರನ್ನು ಉಲ್ಲೇಖಿಸುವ ಸೌಜನ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಾಣಿಜ್ಯ ವಿಭಾಗದ ಡೀನ್ ಪ್ರೊ. ಪಿ.ಲಕ್ಷ್ಮಣ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಣ ವಿಭಾಗದ ಡೀನ್ ಡಾ. ವೆಂಕಟೇಶ್, ತುಮಕೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ. ಜಿ.ಸುದರ್ಶನ ರೆಡ್ಡಿ ಉಪಸ್ಥಿತರಿದ್ದರು. ಕಾರ್ಯಾಗಾರದ ನಿರ್ದೇಶಕ ಡಾ.ಸತ್ಯನಾರಾಯಣ ಸ್ವಾಗತಿಸಿದರು. ಡಾ.ಎ.ಆಸೀಫ್‌ಉಲ್ಲಾ ಕಾರ್ಯಕ್ರಮ ನಿರೂಪಿಸಿದರು.

# ಅಕ್ಷರಸ್ಥರೇ ಹೆಚ್ಚು ಸೈಬರ್ ಕ್ರೈಮ್‌ಗಳಿಗೆ ಒಳಗಾಗುವುದು



## ಸೈಬರ್ ಕ್ರೈಮ್ ಇನ್‌ಸ್ಪೆಕ್ಟರ್ ಬಿ. ಮಂಜುನಾಥ್

ದಾವಣಗೆರೆ, ಮೇ 25 - ಪ್ರಸ್ತುತ ದಿನಮಾನಗಳಲ್ಲಿ ಹೆಚ್ಚು ಜನ ಅಂತರ್ ಜಾಲದ ಬಳಕೆಯನ್ನು ಮಾಡುತ್ತಿದ್ದಾರೆ. ಆದ್ದರಿಂದ ಹೆಚ್ಚು ಹೆಚ್ಚು ಸೈಬರ್ ಕ್ರೈಮ್‌ಗಳು ನಡೆಯುತ್ತಿವೆ. ಅದರಲ್ಲೂ ಅಕ್ಷರಸ್ಥರೇ ಹೆಚ್ಚು ಸೈಬರ್ ಕ್ರೈಮ್‌ಗಳಿಗೆ ಒಳಗಾಗುತ್ತಿದ್ದಾರೆ. ಆಂಡ್ರಾಯ್ಡ್ ಮೊಬೈಲ್‌ಯಿದ್ದರೆ ಸೆರಗಿನಲ್ಲಿ ಕೆಂಡ ಇದ್ದ ಹಾಗೆ ಎಂದು ಸೈಬರ್ ಕ್ರೈಮ್ ಇನ್‌ಸ್ಪೆಕ್ಟರ್ ಬಿ. ಮಂಜುನಾಥ್ ಹೇಳಿದರು.

ನಗರದ ಎ.ವಿ. ಕಮಲಮ್ಮ ಮಹಿಳಾ ಪದವಿ ಕಾಲೇಜಿನಲ್ಲಿ ಎನ್. ಎಸ್.ಎಸ್. ಘಟಕದ ವತಿಯಿಂದ ಸೈಬರ್ ಕ್ರೈಮ್ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಂತ್ರಜ್ಞಾನದ ಜಗತ್ತಿನಲ್ಲಿ ನಾವು ಬದುಕುತ್ತಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಯುವಕ, ಯುವತಿಯರು ಸಕ್ರಿಯವಾಗಿದ್ದಾರೆ. ಅನುಪಯುಕ್ತ ಲಿಂಕ್‌ಗಳನ್ನು ಮತ್ತು ಆ್ಯಪ್‌ಗಳನ್ನು ಬಳಸುವುದನ್ನು ನಿಲ್ಲಿಸಬೇಕು, ಇಲ್ಲವಾದರೆ ಸೈಬರ್ ಕ್ರೈಮ್ ನಂತಹ ಕೃತ್ಯಗಳಿಗೆ ಒಳಗಾಗುತ್ತೀರಿ ಎಂದರು. ಜೊತೆಗೆ ಸೈಬರ್ ಕ್ರೈಮ್ ಜರುಗಿದ ತಕ್ಷಣ ಮಾಡಬೇಕಾದ ಮುನ್ನೆಚ್ಚರಿಕೆಗಳನ್ನು ತಿಳಿಸಿದರು.

ಎನ್.ಎಸ್.ಎಸ್. ಘಟಕದ ಕಾರ್ಯಕ್ರಮಾಧಿಕಾರಿ ಡಾ. ಲೋಹಿತ್ ಹೆಚ್. ಎಂ. ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಮೊಬೈಲ್ ಬಳಕೆಯಿಂದ ಜೀವನ ಪ್ರೀತಿ ಮತ್ತು ಸಂಬಂಧಗಳ ನಡುವೆ ಅಂತರ ಉಂಟಾಗುತ್ತದೆ. ತಂದೆ -ತಾಯಿಗಳೂ ಪದವಿ ಹಂತದ ಮಕ್ಕಳನ್ನು ಜಾಗ್ರತೆಯಿಂದ ಮನೆಯಲ್ಲಿ ಗಮನಿಸುತ್ತಿರಬೇಕು ಎಂದು ಹೇಳಿದರು. ಎ.ವಿ.ಕೆ. ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕಮಲಾ ಸೊಪ್ಪಿನ ಅಧ್ಯಕ್ಷತೆ ವಹಿಸಿ ಮಾತನಾಡಿ ಸೈಬರ್ ಕ್ರೈಮ್ ಬಗ್ಗೆ ಪ್ರಸ್ತುತ ದಿನಮಾನಗಳಲ್ಲಿ ಎಚ್ಚರಿಕೆ ಇರಬೇಕಾದ ಸಂಗತಿ, ಮೊಬೈಲ್ ಬಳಕೆಯನ್ನು ಮಾಡುವಾಗ ಜಾಗರೂಕರಾಗಿರಬೇಕು. ವಿದ್ಯಾರ್ಥಿಗಳು ಅಂತರ್ಜಾಲ ಬಳಕೆಯನ್ನು ಕಡಿಮೆ ಮಾಡಬೇಕು. ಓದಿನ ಕಡೆಗೆ ಹೆಚ್ಚು ಗಮನ ನೀಡಬೇಕೆಂದು ತಿಳಿಸಿದರು.

ಕಾಲೇಜಿನ ಐಕ್ಯೂಎಸಿ ಸಂಯೋಜಕ ಶಿವಕುಮಾರ್ ಆರ್.ಆರ್.ಎನ್.ಎಸ್.ಎಸ್ ಘಟಕದ ಕಾರ್ಯಕ್ರಮಾಧಿಕಾರಿ ಉಷಾ ಎಂ.ಆರ್. ಉಪಸ್ಥಿತರಿದ್ದರು. ಸೃಷ್ಟಿ ಎಂ.ಪಿ. ಸಹನ ಎಸ್. ನಿರೂಪಿಸಿದರು. ಸಹನ ಮತ್ತು ಸಂಗಡಿಗರು ಪ್ರಾರ್ಥನೆ ಮಾಡಿದರು. ತುಳುಜಾಲಕ್ಷ್ಮಿ ಜೆ.ಸಿ. ಸ್ವಾಗತಿಸಿದರು. ರುಚಿತ ಸಿ. ವಂದಿಸಿದರು.

# ಸಭಾಧ್ಯಕ್ಷರಾಗಿ ಖಾದರ್ : ಹೊನ್ನಾಳಿಯಲ್ಲಿ ಸಂಭ್ರಮ



ಹೊನ್ನಾಳಿ, ಮೇ 25- ಶಾಸಕ ಡಿ.ಜಿ. ಶಾಂತನಗೌಡ ಪುತ್ರ ಡಿ.ಎಸ್. ಸುರೇಂದ್ರ ಪುರಸಭೆ ಸದಸ್ಯರಾದ ಸಾಬೀರ್ ಅಲಿ, ಷಾ ಅಬ್ರಾಹಂ, ಶಬ್ಬೀರ್ ಖಾನ್, ಭೋವಿ ಶಿವು ಎಂ.ಬಿ. ರುಸ್ತುಂ ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ಅನ್ವರ್ ಸಾಬ್, ಪುರ ಸಭೆ ಮಾಜಿ ಸದಸ್ಯೆ ಎ. ಆರೀಫ್ ಅಲಿ, ಪಿ.ಎಸ್. ನಿಜಲಿಂಗಪ್ಪ, ಮುಖಂಡರಾದ ಬಿ. ರಫೀವುಲ್ಲಾ, ಫಾಜಿಲ್ ಖಾನ್, ಪುಟ್ಟಪ್ಪ ದಾದುಪೀರ್, ಯುವ ಕಾಂಗ್ರೆಸ್ ಅಧ್ಯಕ್ಷ ಜಾಫರ್, ನೂರುಲ್ಲಾ ಸಾಬ್, ಅಕ್ಬರ್ ಅಲಿ, ಚಮನ್ ಸೈಯದ್, ಮನ್ಸೂರ್, ಅಮಾನುಲ್ಲಾ, ಜನತಾ ಬಜಾರ್ ನಿರ್ದೇಶಕ, ಪಿ.ಎಚ್. ಶಿವಕುಮಾರ್, ಮೊಹಮ್ಮದ್ ಬುರಾನ್, ಪೂಜಾರ್ ಮಹೇಶ್, ಪೂಜಾರ್ ಭರತ್ ಮತ್ತು ಕುಂಬಳೂರು ವಾಸು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಉದ್ಘಾಟನಾ ಶನಿವಾರ ಸಂಪುಟ ವಿಸ್ತರಣೆ

**(1ನೇ ಪುಟದಿಂದ)** ರಾಯರೆಡ್ಡಿ, ಡಾ. ಹೆಚ್.ಸಿ. ಮಹಾದೇವಪ್ಪ, ಪಿರಿಯಾಪಟ್ಟಣ ವೆಂಕಟೇಶ್, ಎಸ್. ಎಸ್.ಮಲ್ಲಿಕಾರ್ಜುನ್, ಭೈರತಿ ಸುರೇಶ್, ಕೃಷ್ಣ ಭೈರೇಗೌಡ, ರಹೀಂ ಖಾನ್, ಅಜಯ್ ಸಿಂಗ್, ಪುಟ್ಟರಂಗ ಶೆಟ್ಟಿ, ನರೇಂದ್ರ ಸ್ವಾಮಿ, ಚಿಂತಾಮಣಿ ಸುಧಾಕರ್, ಹಿರಿಯೂರು ಸುಧಾಕರ್, ಎಚ್.ಕೆ. ಪಾಟೀಲ್, ಚೆಲುವರಾಯ ಸ್ವಾಮಿ, ಮಧುಗಿರಿ ರಾಜಣ್ಣ ಅಥವಾ ನಾಗೇಂದ್ರ, ಮಧು ಬಂಗಾರಪ್ಪ, ಮಂಕಾಳ ವೈದ್ಯ, ಶಿವರಾಜ ತಂಗಡಗಿಗೆ ಸಚಿವ ಸ್ಥಾನ ಸಿಗುವ ಸಾಧ್ಯತೆ ಇದೆ.

ಸಂಪುಟ ವಿಸ್ತರಣೆ ಕುರಿತಂತೆ ಚರ್ಚೆ ನಡೆಸಲು ದೆಹಲಿಗೆ ಧಾವಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಸಂಪುಟಕ್ಕೆ ಯಾರನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ವರಿಷ್ಠರೊಟ್ಟಿಗೆ ಸಮಾಲೋಚನೆ ನಡೆದಿದೆ. ನಾಳೆ ಸಂಜೆ ವೇಳೆಗೆ ಪ್ರಕ್ರಿಯೆ ಪೂರ್ಣಗೊಳ್ಳಲಿದ್ದು, ನಾನು ಮತ್ತು ಉಪಮುಖ್ಯಮಂತ್ರಿ ಸೇರಿದಂತೆ ದೆಹಲಿಗೆ ಧಾವಿಸಿರುವ ಸಚಿವರು ಮತ್ತು ಶಾಸಕರು ಶುಕ್ರವಾರ ಸಂಜೆಯೇ ಬೆಂಗಳೂರಿಗೆ ಹಿಂತಿರುಗುತ್ತೇವೆ ಎಂದು ಹೇಳಿದ್ದರು.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಬೆಂಬಲಿಗರಿಗೆ ಮಂತ್ರಿಮಂಡಲದಲ್ಲಿ ಹೆಚ್ಚು ಸ್ಥಾನ ಕೊಡಿಸಲು ಪೈಪೋಟಿ ನಡೆಸಿದ್ದಾರೆ. ಬುಧವಾರ ಮಧ್ಯಾಹ್ನವೇ ದೆಹಲಿಗೆ ತೆರಳಿದ್ದ ಶಿವಕುಮಾರ್ ಅಂದು ಸಂಜೆಯೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿ, ಮಂತ್ರಿಮಂಡಲ ವಿಸ್ತರಣೆ ಕುರಿತಂತೆ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಿದ್ದರು.

ಇಂದು ಬೆಳಿಗ್ಗೆ ಎಐಸಿಸಿಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗು ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಣದೀಪ್‌ಸಿಂಗ್ ಸುರ್ಜೆವಾಲಾ ಅವರೊಟ್ಟಿಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಯವರು ಚರ್ಚೆ ನಡೆಸಿದರು.

ಸಚಿವ ಸ್ಥಾನಗಳಿಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ವರಿಷ್ಠರ ಜೊತೆ ಈ ಹಿಂದೆಯೂ ಚರ್ಚೆ ನಡೆಸಿದ್ದರು. ಉಭಯರೂ ತಮ್ಮ ಬಣದ ಶಾಸಕರ ಪರವಾಗಿ ಹೈಕಮಾಂಡ್‌ನಲ್ಲಿ ವಾದ ಮಂಡಿಸಿದ್ದರು. ಉಭಯರೂ ಒಮ್ಮತಕ್ಕೆ ಬಾರದ ಕಾರಣ ಈ ಹಿಂದೆ 8 ಸಚಿವರನ್ನು ಮಾತ್ರ ಆಯ್ಕೆ ಮಾಡಲಾಗಿತ್ತು.

# ಸಂಸತ್ ಕಟ್ಟಡ ರಾಷ್ಟ್ರಪತಿಯಿಂದ ಉದ್ಘಾಟನೆಯಾಗಲಿ

**(1ನೇ ಪುಟದಿಂದ)** ದಾಖಲಿಸಿ ದ್ದು, ರಾಷ್ಟ್ರಪತಿಗೆ ಆಹ್ವಾನ ನೀಡದೇ ಇರುವುದು ಸಂವಿಧಾನದ ಉಲ್ಲಂಘನೆ ಎಂದು ಹೇಳಿದ್ದಾರೆ. ರಾಷ್ಟ್ರಪತಿ ದೇಶದ ಪ್ರಥಮ ಪ್ರಜೆಯಾಗಿದ್ದಾರೆ ಹಾಗೂ ಸಂಸತ್ತಿನ ಮುಖ್ಯಸ್ಥರಾಗಿದ್ದಾರೆ. ರಾಷ್ಟ್ರಪತಿ ಅವರೇ ಸಂವಿಧಾನದ ನೂತನ ಕಟ್ಟಡ ಉದ್ಘಾಟಿಸುವಂತೆ ನಿರ್ದೇಶನ ನೀಡಬೇಕು ಎಂದು ಮನವಿಯಲ್ಲಿ ಕೋರಲಾಗಿದೆ. ಮೇ 28ರ ಭಾನುವಾರದಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನವನ್ನು ಉದ್ಘಾಟಿಸಲಿದ್ದಾರೆ.

# ಅಮುಲ್‌ಗೆ ವಿರೋಧ

**(1ನೇ ಪುಟದಿಂದ)** ಸ್ಟಾಲಿನ್ ಆಕ್ಷೇಪಿಸಿದ್ದಾರೆ. ಅಮುಲ್ ಸಂಸ್ಥೆಯು ಬಹು ರಾಜ್ಯ ಸಹಕಾರಿ ಅನುಮತಿಯನ್ನು ಹೊಂದಿದೆ. ಈ ಸಂಸ್ಥೆಯು ತಮಿಳು ನಾಡಿನ ಕೃಷ್ಣಗಿರಿ ಜಿಲ್ಲೆಯಲ್ಲಿ ಹಾಲು ಸಂಸ್ಕರಣೆ ಘಟಕವನ್ನು ಆರಂಭಿಸಿದೆ. ಅಮುಲ್ ಸಂಸ್ಥೆಯು ಆಂಧ್ರಪ್ರದೇಶದ ಚಿತ್ತೂರಿನಲ್ಲೂ ಘಟಕ ತೆರೆದಿದೆ. ಈ ಘಟಕ ವೆಲ್ಲೂರಿನಿಂದ ಹಾಲು ಖರೀದಿಸುತ್ತಿದೆ. ತಿರುವಣ್ಣಾಮಲೈ, ಕಾಂಚೀಪುರಂ, ರಾಣಿಪೇಟ್, ವೆಲ್ಲೂರು ಹಾಗೂ ತಿರುವಳ್ಳೂರು ಜಿಲ್ಲೆಗಳಲ್ಲಿ ಸ್ವಸಹಾಯ ಸಂಘಗಳು ಹಾಗೂ ಸಹಕಾರಿಗಳ ಮೂಲಕ ಹಾಲು ಖರೀದಿಸಲಾಗುತ್ತಿದೆ ಎಂದು ಸ್ಟಾಲಿನ್ ಹೇಳಿದ್ದಾರೆ.

ಕೃಷ್ಣಗಿರಿ, ಧರ್ಮಪುರಿ, ವೆಲ್ಲೂರು, ರಾಣಿಪೇಟ್, ಕಾಂಚೀಪುರಂ ಹಾಗೂ ತಿರುವಳ್ಳೂರು ಜಿಲ್ಲೆಗಳಲ್ಲಿ ರೈತ ಸಹಕಾರಿ ಒಕ್ಕೂಟಗಳು ಹಾಗೂ ಸ್ವಸಹಾಯ ಸಂಘಗಳ ಮೂಲಕ ಹಾಲು ಖರೀದಿಗೆ ಅಮುಲ್ ಉದ್ದೇಶಿಸಿದೆ ಎಂದು ಸ್ಟಾಲಿನ್ ಹೇಳಿದ್ದಾರೆ.

ಭಾರತದಲ್ಲಿ ಒಂದು ಸಹಕಾರಿ ಸಂಸ್ಥೆಯು ಬೇರೆ ಸಹಕಾರಿ ಸಂಸ್ಥೆ ಇರುವ ರಾಜ್ಯಕ್ಕೆ ಕಾಲಿಡಬಾರದು. ಈ ನಿಯಮವನ್ನು ಅಮುಲ್ ಉಲ್ಲಂಘಿಸುತ್ತಿದೆ ಎಂದವರು ಆರೋಪಿಸಿದ್ದಾರೆ.

# ಅಕ್ಕಿ ಪೂರೈಕೆಗೆ ಕಾಂಗ್ರೆಸ್ ಆಕ್ಷೇಪ

**(1ನೇ ಪುಟದಿಂದ)** ಅಧ್ಯಯನದಿಂದ ತಿಳಿಸಲಾಗಿದೆ ಎಂದು ಸರ್ಕಾರ ಹೇಳಿತ್ತು. ಕಳೆದ ಅಕ್ಟೋಬರ್ 2021ರಿಂದ ಕಬ್ಬಿಣ, ಫೋಲಿಕ್ ಆಸಿಡ್ ಹಾಗೂ ವಿಟಮಿನ್ ಬಿ12 ಅಂಶ ಇರುವ ಫೋರ್ಟಿಫೈಡ್ ಅಕ್ಕಿಯನ್ನು ಪಡಿತರ ಮೂಲಕ ವಿತರಿಸುವ ಪ್ರಕ್ರಿಯೆನ್ನು ಹಂತ ಹಂತವಾಗಿ ಆರಂಭಿಸಲಾಗಿತ್ತು. ಫೋರ್ಟಿಫೈಡ್ ಅಕ್ಕಿಯಿಂದ ಮಕ್ಕಳ ಆರೋಗ್ಯದ ಮೇಲೆ ಪರಿಣಾಮವಾಗುವ ಬಗ್ಗೆ ನೀತಿ ಆಯೋಗದ ಸದಸ್ಯ ರಮೇಶ್ ಚಂದ್ ಅವರು ಕಳವಳ ವ್ಯಕ್ತಪಡಿಸಿದ್ದರು ಎಂದು ಖೇರ ಪ್ರತಿಪಾದಿಸಿದ್ದಾರೆ.

ಐ.ಸಿ.ಎ.ಆರ್. ಪ್ರಧಾನ ನಿರ್ದೇಶಕರು ಫೋರ್ಟಿಫೈಡ್ ಅಕ್ಕಿಯ ಬಗ್ಗೆ ಪರಿಣಿತರ ಜೊತೆ ವ್ಯಾಪಕ ಚರ್ಚೆ ನಡೆಯಬೇಕು ಎಂದು ಹೇಳಿದ್ದಾರೆ ಎಂದೂ ಖೇರ ತಿಳಿಸಿದ್ದಾರೆ.

# ಏನು ಬೇಕಾದರೂ ಆಗಬಹುದು

**(1ನೇ ಪುಟದಿಂದ)** ಚುನಾವಣೆಯ ನಂತರ ರಾಜ್ಯ ರಾಜಕೀಯದ ಚಿತ್ರಣವೇ ಬದಲಾಗುತ್ತದೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ಸಿನ ಕುತಂತ್ರ ರಾಜಕಾರಣದಿಂದ ನಾವು ಈ ಚುನಾವಣೆ ಸೋಲಬೇಕಾಯಿತು. ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಂದೆ ಬಿಟ್ಟು ನಮ್ಮ ಮತಗಳನ್ನು ಒಡೆಯಲಾಗಿದೆ. ಬಿಜೆಪಿ ಜೊತೆ ಕೈ ಜೋಡಿಸಲಿದ್ದಾರೆ ಎಂದು ಸುಳ್ಳು ಸುದ್ದಿಯನ್ನು ಕಾಂಗ್ರೆಸ್ ಹರಡಿದ್ದರಿಂದ ನಾವು ಸೋತಿದ್ದೇವೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ರಾಜ್ಯದ ಜನತೆ ಪ್ರಥಮ ಬಾರಿಗೆ ಇಂತಹ ಫಲಿತಾಂಶವನ್ನು ಜೆಡಿಎಸ್‌ಗೆ ಕೊಟ್ಟಿದ್ದಾರೆ. ಇದನ್ನು ನಾವು ನಿರೀಕ್ಷೆ ಮಾಡಿರಲಿಲ್ಲ ಎಂದರು.

# ಅಧಿಕಾರಿಗಳು ಕೈಜೋಡಿಸಬೇಕು : ಶಾಸಕಿ ಲತಾ



**(1ನೇ ಪುಟದಿಂದ)** ಕೂಡಿಸಿ, ಸೌಜನ್ಯದಿಂದ ಮಾತನಾಡಬೇಕು. ಅವರ ಜೊತೆ ಅಗೌರವದಿಂದ ಮಾತನಾಡಬೇಡಿ ಎಂದು ನೌಕರರಿಗೆ ಕಿವಿಮಾತು ಹೇಳಿದರು.

ಆಡಳಿತದ ಬಗ್ಗೆ ನಾನು ಇನ್ನು ತಿಳಿದುಕೊಳ್ಳಬೇಕಿದೆ. ಕ್ಷೇತ್ರದ ಜನರ ಜೊತೆಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದೇನೆ. ಸತ್ಯ, ನಿಷ್ಠೆಯಿಂದ ಕೆಲಸ ಮಾಡಿ. ಹಿಂದೆ ನೀವು ಏನು ಮಾಡಿದ್ದೀರಾ ಎನ್ನುವುದು ಬೇಕಾಗಿಲ್ಲ. ಆ ಬಗ್ಗೆ ಕೇಳುವುದಿಲ್ಲ. ಮುಂದಿನ ದಿನಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ. ನಿಮ್ಮ ಸಹಕಾರ ಎಷ್ಟು ಸಿಗುತ್ತದೆಯೋ ಅಷ್ಟೊಂದು ಅಭಿವೃದ್ಧಿ ಮಾಡುತ್ತೇನೆ ಎಂದರು.

ಸರ್ಕಾರದ ಮಟ್ಟದಲ್ಲಿ ನಾನು ಹೆಚ್ಚಿನ ಅನುದಾನವನ್ನು ಹರಪನಹಳ್ಳಿಗೆ ತರಲು ಬಯಸುತ್ತೇನೆ. ನಾನು-ನೀವು ಎಲ್ಲರೂ ಸೇರಿ ಕುಟುಂಬದ ರೀತಿಯಲ್ಲಿ ಪಟ್ಟಣದ ಅಭಿವೃದ್ಧಿ ಕೆಲಸಗಳನ್ನು ಮಾಡೋಣ ಎಂದು ತಿಳಿಸಿದರು.

ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಮಾತನಾಡಿ, ಶಾಸಕರ ಮಾರ್ಗದರ್ಶನದಲ್ಲಿ ತಾಲ್ಲೂಕಿನ ಸಮಗ್ರ ಅಭಿವೃದ್ಧಿ ಮಾಡುವ ಮೂಲಕ ಹರಪನಹಳ್ಳಿಗೆ ಉತ್ತಮ ಹೆಸರು ಬರಲು ನಾವೆಲ್ಲರೂ ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ಶಿವಕುಮಾರ ಬಿರಾದಾರ, ತಾಪಂ ಇಓ ಕೆ.ಆರ್. ಪ್ರಕಾಶ್, ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ರೇಣುಕಾದೇವಿ, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಜಯರಾಜ್, ಇಸಿಓ ಕಬೀರನಾಯ್ಕ ಸೇರಿದಂತೆ ವಿವಿಧ ಇಲಾಖೆಯ ಮುಖ್ಯಸ್ಥರು ಹಾಜರಿದ್ದು, ಶಾಸಕರಿಗೆ ಅಭಿನಂದಿಸಿದರು.

# ಸಂವಿಧಾನ ಉಳಿಸಲು, ಜನಪರ ಬದಲಾವಣೆ ತರಲು ಪತ್ರಿಕೋದ್ಯಮದಿಂದ ಸಾಧ್ಯ

## ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ. ಪ್ರಭಾಕರ್ ಪ್ರತಿಪಾದನೆ



ಬೆಂಗಳೂರು, ಮೇ 25 - ಸಂವಿಧಾನವನ್ನು ಉಳಿಸಲು ಪತ್ರಿಕೋದ್ಯಮ ಸಹಾ ಮಹತ್ವದ ದಾರಿ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ರಾದ ಕೆ.ವಿ. ಪ್ರಭಾಕರ್ ಅವರು ಅಭಿಪ್ರಾಯಪಟ್ಟರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ದಿಂದ ಸಂಘದ ಕಚೇರಿಯಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಕೆಯುಡಬ್ಲ್ಯುಜೆ ಗೌರವ ಸ್ವೀಕರಿಸಿ ಅವರು ಮಾತನಾಡಿದರು.

ಪತ್ರಿಕೋದ್ಯಮ ನನ್ನ ಉಸಿರು. ಪತ್ರಿಕೋದ್ಯಮ ಅನೇಕ ಮೌಲ್ಯಗಳನ್ನು ಕಲಿಸಿದೆ. ಸಮಾಜದಲ್ಲಿ ಜನಪರ ಬದಲಾವಣೆ ತರುವಲ್ಲಿ ಪತ್ರಿಕೋದ್ಯಮದ ಪಾತ್ರ ಮುಖ್ಯವಾದದ್ದು. ಹಾಗಾಗಿ ನನಗೆ ಪತ್ರಿಕೋದ್ಯಮದ ಘನತೆಯ ಬಗ್ಗೆ ಎಚ್ಚರ ಮತ್ತು ಪ್ರೀತಿ ಇದೆ ಎಂದು ಹೇಳಿದರು.

ಪತ್ರಕರ್ತರು ತಮ್ಮ ವೃತ್ತಿ ಕ್ಷೇತ್ರದಲ್ಲಿ ಭಾರೀ ಸವಾಲನ್ನು ಎದುರಿಸುತ್ತಿದ್ದಾರೆ. ಏನೇ ಆದರೂ ಸದಾ ವೃತ್ತಿ ಬದ್ಧತೆ ಮೆರೆದರೆ ಮಾತ್ರ ಉತ್ತಮ ಪತ್ರಕರ್ತರಾಗಲು ಸಾಧ್ಯ ಎಂದು ಪ್ರತಿಪಾದಿಸಿದರು.

ಪತ್ರಿಕೋದ್ಯಮ ವೃತ್ತಿಯಲ್ಲಿ ಉತ್ತಮ ಮಾರ್ಗದರ್ಶನ ದೊರೆತರೆ ಸ್ಥಾನಮಾನಗಳು ಪತ್ರಕರ್ತರನ್ನು ಹುಡುಕಿಕೊಂಡು ಬರುತ್ತವೆ, ಸಂವಿಧಾನದ ಆಶಯದ ಅನುಗುಣಕ್ಕೆ ಪತ್ರಕರ್ತರು ನಡೆದುಕೊಳ್ಳುವುದನ್ನು ಕಲಿಯಬೇಕು ಎಂದು ಅವರು ಕರೆ ನೀಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಪತ್ರಕರ್ತರಾಗಿ ಒಂದೊಂದೆ ಹೆಜ್ಜೆ ಇಟ್ಟುಕೊಂಡು ಪರಿಶ್ರಮದಿಂದ ಮೇಲೇರಿ ಬಂದ ಪ್ರಭಾಕರ್ ಅವರು ಸಂಯಮದ ನಡವಳಿಕೆಯಿಂದ ಎಲ್ಲರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ ಎಂದು ಶ್ಲಾಘಿಸಿದರು.

ಹಿರಿಯ ಪತ್ರಕರ್ತರುಗಳಾದ ಜಿ.ಎನ್.ಮೋಹನ್ ಮತ್ತು ಕಂ.ಕ.ಮೂರ್ತಿ ಮಾತನಾಡಿ, ಅಧಿಕಾರದ ಹುದ್ದೆಯಲ್ಲಿದ್ದಾಗಲೂ ಪ್ರಭಾಕರ್ ಪತ್ರಕರ್ತರಾಗಿ ಉಳಿದಿದ್ದಾರೆ. ಅವರ ಪರಿಶ್ರಮ ಮತ್ತು ಸಮಚಿತ್ತದ ನಡೆ ಎತ್ತರಕ್ಕೆ ಬೆಳೆಸಿದೆ ಎಂದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಖಜಾಂಚಿ ವಾಸುದೇವ ಹೊಳ್ಳ, ಹಿರಿಯ ಪತ್ರಕರ್ತರಾದ ಗೋಪಿನಾಥ, ಕಂಕ ಮೂರ್ತಿ, ಚೆಲುವರಾಜು, ವೆಂಕಟ ಸಿಂಗ್, ಹರೀಶ್ ಡಿ.ಎಲ್., ರವಿ ನಾಕಲಗೂಡು, ಗಿರೀಶ್ ಕೋಟೆ, ಅರುಣಾ ಕುಣಿಗಲ್, ಗುರುರಾಜ ಹೂಗಾರ್, ಶಶಿಕಲಾ ಸೇರಿದಂತೆ ಹಲವರು ಪ್ರಭಾಕರ್ ಜೊತೆಗಿನ ಒಡನಾಟ ಮೆಲುಕು ಹಾಕಿ ಕಾರ್ಯಕ್ರಮದಲ್ಲಿ ಶುಭ ಹಾರೈಸಿದರು.

ಕೆಯುಡಬ್ಲ್ಯುಜೆ ರಾಜ್ಯ ಕಾರ್ಯದರ್ಶಿ ನಿಂಗಪ್ಪ ಚಾವಡಿ ಮತ್ತು ಹಲವು ಜಿಲ್ಲೆಯ ಅಧ್ಯಕ್ಷ ಮತ್ತು ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.





## ಯೋಧರಿಗೆ ಗೌರವ

ದಾವಣಗೆರೆ, ಮೇ 25- ಈಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗಸ್ತು ವೀಕ್ಷಣೆಗೆ ಬಂದಿದ್ದ ಯೋಧರಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆ ಕಾಲೇಜಿನ ಪ್ರಾಂಶುಪಾಲ ಎನ್. ಶಿವಪ್ಪ, ಪಾರ್ವತಮ್ಮ ಮತ್ತು ಮೊಮ್ಮಗಳು ಕು. ಪ್ರಿಯಾಂಕ ಅವರುಗಳು ಗೌರವ ಸಲ್ಲಿಸಿದರು.

## ಎಸ್ಸೆಸ್ಸೆಂ, ಲಮಾಣಿಗೆ ಸಚಿವ ಸ್ಥಾನಕ್ಕೆ ಒತ್ತಾಯ

ದಾವಣಗೆರೆ, ಮೇ 25- ಮಾಜಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಹಾಗೂ ರುದ್ರಪ್ಪ ಲಮಾಣಿ ಅವರಿಗೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡುವಂತೆ ಕರ್ನಾಟಕ ತಾಂಡಾ ರಕ್ಷಣಾ ವೇದಿಕೆ ಹಾಗೂ ಬಂಜಾರ ಸಮುದಾಯ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದೆ. ವೇದಿಕೆ ಸಂಸ್ಥಾಪಕ ಹೆಚ್.ಕೆ. ಲಿಂಗರಾಜ್ ನಾಯ್ಕ ಮಾತನಾಡಿ, ಎಸ್.ಎಸ್. ಮಲ್ಲಿಕಾರ್ಜುನ್ ಅವರು ಈ ಹಿಂದೆ ಶಾಸಕರಾಗಿ ದಾವಣಗೆರೆ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಮತ್ತೊಬ್ಬ ಬಂಜಾರ ಸಮುದಾಯದ ನಾಯಕ ರುದ್ರಪ್ಪ ಲಮಾಣಿ ಅವರು ಸಹ ಸಚಿವರಾಗಿ, ಶಾಸಕರಾಗಿ ಹಾವೇರಿ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಶಶಿನಾಯ್ಕ ಪುಟಗನಾಳ್, ರವಿನಾಯ್ಕ, ವೆಂಕಟೇಶ್ ನಾಯ್ಕ, ಲಿಂಗರಾಜ್, ಮಂಜಾನಾಯ್ಕ ಉಪಸ್ಥಿತರಿದ್ದರು.

## ನಗರಕ್ಕೆ ಇಂದು ನ್ಯಾಕ್ ಸಮಿತಿ ಭೇಟಿ

ಶ್ರೀ ಮಂಜುನಾಥ ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್ ಸಮಿತಿ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಲಿದೆ. ನ್ಯಾಕ್ ಸಮಿತಿಯ ಅಧ್ಯಕ್ಷ ಡಾ. ರಂಜಿತ್ ತಮುಳಿ, ಸದಸ್ಯ ಸಂಯೋಜಕ ಮೇಜರ್ ವಿನೀತ ಪಾಟಕ್, ಸದಸ್ಯರಾದ ರುಪ್ರೆಕಾ ಬೋರ್‌ಡೋಲೋಯಿ ಭೇಟಿ ನೀಡಲಿದ್ದಾರೆಂದು ಪ್ರಾಚಾರ್ಯರು ತಿಳಿಸಿದ್ದಾರೆ.

# ಒತ್ತಡವೆಂಬ ಬಿರು ಬಿಸಿಲಿಗೆ, ಸಮಚಿತ್ತತೆಯೆಂಬ ತಂಗಾಳಿ

ಇಂದಿನ ನಾಗಾಲೋಟದ ಪ್ರಪಂಚದಲ್ಲಿ, ನಿತ್ಯ ಜೀವನದ ಒತ್ತಡ ನಿರ್ವಹಿಸುವುದೇ ಬಹುತೇಕರಿಗೆ ಸವಾಲು ಎನಿಸಿದೆ. ಇಂದಿನ ಕಾಲಮಾನದಲ್ಲಿ ಒತ್ತಡವೆಂಬುದು ಸಹಜ ಮತ್ತು ಅನಿವಾರ್ಯ ಎಂಬಂತಾಗಿದೆ. ಕೆಲಸದ ಒತ್ತಡ, ವೈಯಕ್ತಿಕ ಜವಾಬ್ದಾರಿ, ಸ್ಥಾನಮಾನ, ಭವಿಷ್ಯ, ವರ್ತಮಾನಗಳ ನಿರ್ವಹಣೆಯಂತಹ ಅನೇಕ ಸಂಗತಿಗಳು ಒತ್ತಡವನ್ನು ಸೃಷ್ಟಿಸುತ್ತಿವೆ.


ಬಾಹ್ಯ ಅಥವಾ ಆಂತರಿಕವಾದ ಯಾವುದೇ ಕಾರಣವಿದ್ದರೂ ನಮ್ಮ ದೈಹಿಕ ಹಾಗು ಮಾನಸಿಕ ಆರೋಗ್ಯದ ಮೇಲೆ ಅಗಾಧ ಪರಿಣಾಮ ಬೀರುವುದು ಖಚಿತ. ಆಧುನಿಕ ಜೀವನ ಪದ್ಧತಿಯಲ್ಲಿ ಸಹಜವಾಗಿ ಹಬ್ಬಿರುವ ಒತ್ತಡವನ್ನು ನಿಭಾಯಿಸುವ ಜಾಣ್ಮೆಯನ್ನು ನಾವೆಲ್ಲರೂ ಅರಿತಾಗ ಜೀವನ ನಿರ್ವಹಣೆ ಸುಗಮವಾಗಿ ಇರಬಲ್ಲದು.

ಸಂತೃಪ್ತ, ನೆಮ್ಮದಿ, ಆರೋಗ್ಯವಂತ ಬದುಕನ್ನು ನಮ್ಮದಾಗಿಸಿ ಕೊಳ್ಳಲು ಎಲ್ಲರಿಗೂ ಸಾಧ್ಯವಿದೆ. ಅದಕ್ಕೆ ಮುಖ್ಯವಾಗಿ ನಾವೆಲ್ಲರೂ ಪಾಲಿಸಬೇಕಾದ ಅಂಶಗಳೇನು ಎಂಬುದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ.

**ಒತ್ತಡದ ಮೂಲ ಗುರುತಿಸುವಿಕೆ, ಪರಾಮರ್ಶೆ**

ದಿನ ನಿತ್ಯದ ಒತ್ತಡವನ್ನು ನಿಭಾಯಿಸುವಲ್ಲಿನ ಮೊದಲ ಹೆಜ್ಜೆಯೇ ಒತ್ತಡ ಗುರುತಿಸುವಿಕೆ. ಒತ್ತಡದ ಮೂಲ ಕಾರಣ ಅರಿತರೆ ಅರ್ಧ ದಾರಿ ಕ್ರಮಿಸಿದಂತೆ. ಯಾವ ಘಟನೆ, ವ್ಯಕ್ತಿ, ಸನ್ನಿವೇಶದಿಂದಾಗಿ ನಮಗೆ ಒತ್ತಡ ಹೆಚ್ಚು ಎಂಬುದರ ಮೂಲ ಅರಿಯಬೇಕು.

ನಮ್ಮಲ್ಲಿ ಒತ್ತಡವನ್ನು ಪ್ರಚೋದಿಸುವ ಅಂಶಗಳಾವುವು ಎಂದು ತಿಳಿದು ಅದನ್ನು ಅರ್ಥಮಾಡಿಕೊಂಡಾಗ ಒತ್ತಡ ಶಮನದ ಮಾರ್ಗ ಕಾಣಿಸುತ್ತವೆ.



ಎಂಥದ್ದೇ ವಿಷಮ, ಕೈಮೀರಿದ ಸನ್ನಿವೇಶ ಗಳಲ್ಲಿಯೂ ಬುದ್ಧಿಯನ್ನು ಕೋಪದ ಕೈಯಲ್ಲಿ ಕೊಡದೆ ಸಂಯಮದಿಂದ ವರ್ತಿಸುವುದು, ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ತಡೆದು, ಒತ್ತಡವೆಂಬ ಕಳೆ ಬೆಳೆಯದಂತೆ ತಡೆಯಬಹುದು.

**ಸ್ವಯಂ ಕಾಳಜಿಗೆ ಆದ್ಯತೆ, ಇರಲಿ ಪ್ರಶಾಂತತೆ**

ದೈಹಿಕ, ಮಾನಸಿಕ ಹಾಗು ಭಾವನಾತ್ಮಕ ಆರೋಗ್ಯಕ್ಕೆ ಉತ್ತೇಜನ ನೀಡುವುದರ ಮೂಲಕ ನಮ್ಮ ಬಗ್ಗೆ ನಾವು ಸದಾ ಕಾಳಜಿ ವಹಿಸಬೇಕು. ಸಾಕಷ್ಟು ನಿದ್ದೆ, ಸಮತೋಲನವಾದ ಆಹಾರ, ನಿಯಮಿತ ವ್ಯಾಯಾಮ ಹಾಗು ಮನಸ್ಸು ನಿರಾಳವಾಗಲು ಬೇಕಾಗುವ ಧ್ಯಾನ, ಯೋಗ ಹಾಗು ಪ್ರಾಣಾಯಾಮಗಳಿಂದಾಗಿ ಮನಸ್ಸು ಸದಾ ಪ್ರಫುಲ್ಲವಾಗಿ ಇರಿಸಿಕೊಳ್ಳಲು ಸಾಧ್ಯ.

**ಸಮಯ ನಿರ್ವಹಣೆ ಮತ್ತು ಶಿಸ್ತು**

ನಮ್ಮ ದೈನಂದಿನ ಜೀವನದ ಆದ್ಯತೆಗಳನ್ನು ಸರಿಯಾಗಿ ಗುರುತಿಸಿ, ಅದರ ಅನುಸಾರ ಮಹತ್ವ ಕೊಟ್ಟಾಗ ಒತ್ತಡವು ಸಹಜವಾಗಿ ಕುಗ್ಗುತ್ತದೆ. ಮುಖ್ಯ, ಅವಶ್ಯಕ ಕಾರ್ಯಗಳಿಗಷ್ಟೇ ಸಮಯ, ಆದ್ಯತೆ ನೀಡುವುದು ಸಾಧಕರ ಲಕ್ಷಣವೂ ಹೌದು. ವಾಸ್ತವವಾದ ಗುರಿಯ ಜತಗೆ, ಎಲ್ಲವನ್ನು ನಾನೇ ಮಾಡುತ್ತೇನೆಂಬ ಮನೋಭಾವ ತೊರೆದು ಇತರರಿಗೂ ಜವಾಬ್ದಾರಿ ಹಂಚಿ, ಅವರನ್ನು ವಿಶ್ವಾಸದಿಂದ ನಡೆಸಿಕೊಂಡಾಗಲೇ ನಮ್ಮ ಬದುಕಿಗೆ ನಾವು ನಾಯಕರಾಗಲು ಸಾಧ್ಯ.

**ಆರೋಗ್ಯಕರ ಹವ್ಯಾಸಗಳು**

ಒತ್ತಡ ಕಡಿಮೆ ಮಾಡಿಕೊಳ್ಳಲು ಆಲ್ಕೋಹಾಲ್, ಧೂಮಪಾನಕ್ಕೆ ಅನೇಕರು ದಾಸರಾಗುವುದು ನಿಜಕ್ಕೂ ಖೇದದ ಸಂಗತಿ. ಹಾಗೆಯೇ ಹೆಚ್ಚು ಜಂಕ್ ಆಹಾರ ಸೇವನೆ, ಬಿಡುವುದು, ದುಶ್ಚಟಗಳಿಂದ ದೂರ ಇರುವುದು ಒತ್ತಡ ನಿರ್ವಹಣೆಯಲ್ಲಿ ಖಂಡಿತಾ ಪಾತ್ರ ವಹಿಸುತ್ತದೆ. ತಕ್ಷಣದ ನಿರ್ಧಾರ, ಮಾತಿಗೆ ಬೀಳದೇ ಸಾವಧಾನದಿಂದ, ಶಾಂತಿಯಿಂದ ಇರುವುದನ್ನು, ವರ್ತಿಸುವುದನ್ನು ನಾವೆಲ್ಲರೂ ಅಭ್ಯಾಸ ಮಾಡಿಕೊಳ್ಳಬೇಕು. ಕುಟುಂಬದವ ರೊಂದಿಗೆ ಪ್ರೀತಿ ಪಾತ್ರರೊಂದಿಗೆ ಹೆಚ್ಚು ಸಮಯ ಕಳೆಯಬೇಕು. ಸ್ನೇಹಿತರು, ಬಂಧುಗಳಿಂದ ಅವಶ್ಯವಿದ್ದಾಗ ಸಲಹೆ, ಸೂಚನೆ, ಮಾನಸಿಕ ಬೆಂಬಲ ಪಡೆಯುವುದು ಎಂದಿಗೂ ತಪ್ಪಲ್ಲ. ನಮ್ಮ ಆಪ್ತರೊಂದಿಗೆ ನೋವು, ನಲಿವಿನ ಭಾವನೆ, ಅನುಭವಗಳನ್ನು ಹಂಚಿಕೊಂಡಾಗ ಒತ್ತಡವನ್ನು ನಾವು ಶಮನ ಮಾಡಲು ಸಾಧ್ಯ.

**5. ಧನಾತ್ಮಕ ಚಿಂತನ-ಮಂಥನ**

ಇತರರು ನಮ್ಮೊಂದಿಗೆ ತಮ್ಮ ನೋವು ನಲಿವುಗಳನ್ನು ಹಂಚಿಕೊಂಡಾಗ ಸಂಪೂರ್ಣವಾಗಿ ಅವರಿಗೆ ಕಿವಿಯಾಗುವುದು, ಮಾನಸಿಕ ಸ್ಥೈರ್ಯ ನೀಡುವುದು, ಇತರರ ಕಷ್ಟ, ಸಮಸ್ಯೆಗಳಿಗೆ ಸ್ಪಂದಿಸುವುದು, ಬೇರೆಯವರ ಯಶಸ್ಸಿಗೆ ಖುಷಿಪಡುವ ಮನಸ್ಥಿತಿಯು ನಮ್ಮ ಮನಸನ್ನು ಸದಾ ಹಸಿರಾಗಿ ಇಡಬಲ್ಲದು.

ನಾವು ಜೀವನದಲ್ಲಿ ಯಶಸ್ಸು ಕಂಡಾಗ ಅದಕ್ಕೆ ಕಾರಣರಾದವರಿಗೆ ಎಲ್ಲರಲ್ಲೂ ಕೃತಜ್ಞತಾಭಾವ ಹೊಂದಿರುವುದು ಕೂಡ ಅಷ್ಟೇ ಮುಖ್ಯವಾಗುತ್ತದೆ. ನಮ್ಮ ಸುತ್ತಲೂ ಉತ್ತಮ ಚಿಂತನೆಗಳ ವ್ಯಕ್ತಿಗಳು ಹಾಗು ಪರಿಸರ ಸೃಷ್ಟಿ ಮಾಡಿಕೊಂಡಾಗ ಒತ್ತಡವು ತಾನಾಗಿಯೇ ಕಾಣೆಯಾಗುತ್ತದೆ.

**ಸಮತೋಲನವಾದ ಬದುಕು**

ಆರೋಗ್ಯಕರವಾದ ಜೀವನ ಶೈಲಿಯು ದೀರ್ಘಕಾಲಿಕ ಒತ್ತಡ ತಡೆಯುವಲ್ಲಿ ಯಶಸ್ವಿಯಾಗಬಲ್ಲದು. ವೈಯಕ್ತಿಕ ಹಾಗು ವೃತ್ತಿ ಜೀವನ ಒಂದಕ್ಕೊಂದು ಪೂರಕವಾಗಿ ನಿರ್ವಹಣೆ ಮಾಡುವುದನ್ನು ನಾವೆಲ್ಲರೂ ಅರಿಯಬೇಕಿದೆ. ದೇಹ ಹಾಗು ಮನಸ್ಸಿಗೆ ವಿಶ್ರಾಂತಿ ಸಿಗುವಂತಹ ಹಾಗು ಅಧ್ಯಾತ್ಮಿಕ ಚಟುವಟಿಕೆಗಳು ಒತ್ತಡ ರಹಿತ, ಸದೃಢ ಜೀವನಕ್ಕೆ ಯಶಸ್ಸು ತುಂಬಿದ ಜೀವನಕ್ಕೆ ಜೀವಸೆಲೆ ಆಗಬಲ್ಲವು.

ನಮ್ಮೆಲ್ಲ ಪ್ರಯತ್ನಗಳು, ಹೋರಾಟಗಳು ಜೀವನಕ್ಕಾಗಿಯೇ ಇರುವಾಗ, ಜೀವನವನ್ನು ಒತ್ತಡದ ಹಿಡಿತಕ್ಕೆ ನೀಡದಂತೆ ನಾವೆಲ್ಲರೂ ಮಾನಸಿಕವಾಗಿ ಸದೃಢರಾಗೋಣ ಎಂಬುದು ನನ್ನ ಅರಿಕೆ.

- ಡಾ|| ರವಿಕುಮಾರ್ ಟಿ.ಜಿ
ವ್ಯವಸ್ಥಾಪಕ ನಿರ್ದೇಶಕ
ಆರೈಕೆ ಆಸ್ಪತ್ರೆ, ದಾವಣಗೆರೆ.

# ಕನ್ನಡ ಭಾಷೆ ಕಡೆಗಣಿಸಿದ ಜನಪ್ರತಿನಿಧಿಗಳ ನಡೆ ಖಂಡನೀಯ

ಬೆಂಗಳೂರು, ಮೇ 24- ಕೆಲವು ಜನಪ್ರತಿನಿಧಿಗಳು ನಾಡು-ನುಡಿಯ ಅಭಿಮಾನ ಮರೆತು, ಕನ್ನಡದ ಅಸ್ಮಿತೆಗೆ ಅಡ್ಡಿ ತರುವಂತೆ ವರ್ತಿಸುತ್ತಿದ್ದಾರೆ. ಕನ್ನಡ ಭಾಷೆ, ಸಂಸ್ಕೃತಿಯನ್ನು ಕಡೆಗಣಿಸುವುದು ಎಂದರೆ ತನ್ನ ಸ್ವಂತ ತಾಯಿಯನ್ನು ಕಡೆಗಣಿಸಿದಂತೆ ಎನ್ನುವ ಭಾವನೆ ಅರಿತು ಕೊಳ್ಳಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ನಾಡೋಜ ಡಾ. ಮಹೇಶ ಜೋಶಿ ಅವರು ಬೇಸರ ವ್ಯಕ್ತ ಪಡಿಸಿದ್ದಾರೆ.

ನೂತನವಾಗಿ ಆಯ್ಕೆಯಾಗಿರುವ ಶಾಸಕರು ಹಾಗೂ ಸಚಿವರು ಪ್ರಮಾಣ ವಚನ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ಕಡೆಗಣಿಸಿ ಅನ್ಯಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿರುವುದು ಅಕ್ಷಮ್ಯ. ಇದನ್ನು ಕನ್ನಡಿಗರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ.

ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಜಮೀರ್ ಅಹಮ್ಮದ್ ಖಾನ್ ಅವರು ಆಂಗ್ಲ ಭಾಷೆಯಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದರು. ಈ ಹಿಂದೆ ಮೂರು ಬಾರಿ ಪ್ರಮಾಣ ವಚನ ಸ್ವೀಕರಿಸುವಾಗಲೂ ಇಂತಹದ್ದೇ ತಪ್ಪು ಮಾಡಿ ನಂತರ ಕನ್ನಡಿಗರಲ್ಲಿ ಕ್ಷಮೆಯಾಚಿಸಿ ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳುವ ಭರವಸೆಯನ್ನು ನೀಡಿದ್ದರು.

ಸ್ವತಃ ಕನ್ನಡ ನಾಡಿನ ಹೆಮ್ಮೆಯ ಹಾಗೂ ಕನ್ನಡಿಗರ ಅಸ್ಮಿತೆಯ ಪ್ರತೀಕವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಸ್ಥಾನ ಹೊಂದಿರುವ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಜಮೀರ್ ಅಹಮ್ಮದ್ ಖಾನ್ ಅವರಿಗೆ ಕನ್ನಡದ ಬಗ್ಗೆ ಅಭಿಮಾನ ಇಲ್ಲ ಎನ್ನುವುದು ಖೇದಕರ ಸಂಗತಿ. ಜಮೀರ್ ಅವರು ಪ್ರತಿನಿಧಿಸುವ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬಹುಪಾಲು ಕನ್ನಡಿಗರೇ ಇರುವುದು. ಜೊತೆಗೆ ಕನ್ನಡದ ನಾಡು, ನುಡಿಗೆ ತಮ್ಮ ಸರ್ವಸ್ವವನ್ನೇ ಮುಡಿಪಾಗಿಟ್ಟ ಅನೇಕ ಕನ್ನಡ ಕಣ್ಮಣಿಗಳು ಓಡಾಡಿದ ಪುಣ್ಯ ನೆಲವನ್ನು ಅವರು ಪ್ರತಿನಿಧಿಸುತ್ತಿದ್ದಾರೆ. ಕನ್ನಡದ ಕಟ್ಟಾಳುಗಳು ಓಡಾಡಿದ ನೆಲವನ್ನು ವಿಧಾನಸೌಧದಲ್ಲಿ ಪ್ರತಿನಿಧಿಸುವ ವ್ಯಕ್ತಿ ಜವಾಬ್ದಾರಿಯುತವಾಗಿ, ಕನ್ನಡಕ್ಕೆ ಗೌರವ ನೀಡಲೇಬೇಕು. ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುವುದರ ಜೊತೆಗೆ ಕಾಯ್ದುಕೊಳ್ಳುವ ಹೊಣೆಗಾರಿಕೆಯನ್ನೂ ಸಹ ವಹಿಸಿಕೊಳ್ಳಬೇಕಾಗುತ್ತದೆ ಎಂದು ನಾಡೋಜ ಡಾ. ಮಹೇಶ ಜೋಶಿ ಅವರು ತಿಳಿಸಿದ್ದಾರೆ.

ನೂತನವಾಗಿ ಆಯ್ಕೆಯಾಗಿರುವ 224 ಶಾಸಕರ ಪೈಕಿ 181 ಶಾಸಕರು ವಿಧಾನಸಭೆಯಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ತಮ್ಮ ಕರ್ತವ್ಯವನ್ನು ಆರಂಭಿಸಿದ್ದಾರೆ. ಅವರ ಪೈಕಿ ನಾಲ್ವರು ಮಾತ್ರ ಕನ್ನಡ ಭಾಷೆಯನ್ನು ಕಡೆಗಣಿಸಿದ್ದಾರೆ. ಕನ್ನಡ ನಾಡಿನಲ್ಲಿ ನಮ್ಮ ಭಾಷೆ, ಸಂಸ್ಕೃತಿಯನ್ನು ತಳ ಮಟ್ಟದಿಂದ ಉಳಿಸಿ, ಬೆಳೆಸಬೇಕು ಎನ್ನುವುದು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲ ಧ್ಯೇಯವಾಗಿದೆ. ಈ ಹಿನ್ನೆಲೆಯಲ್ಲಿ ಕಳೆದ ಸರ್ಕಾರದಲ್ಲಿ 'ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ವಿಧೇಯಕ - 2022'ಅನ್ನು ಕಾನೂನಾಗಿ ಅಂಗೀಕಾರ ಮಾಡಿರುವುದು.

ದೇಶದ ಗಣರಾಜ್ಯದ 73 ವರ್ಷಗಳಲ್ಲಿ ಕರ್ನಾಟಕ ವಿಧಾನಮಂಡಲದಿಂದ, ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗಾಗಿ, ಕನ್ನಡಿಗರಿಗೆ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಅವಕಾಶಗಳನ್ನು ಮತ್ತು ಕಲ್ಯಾಣ ಕ್ರಮಗಳನ್ನು ಕಲ್ಪಿಸುವುದಕ್ಕಾಗಿ 'ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ವಿಧೇಯಕ 2022'ವನ್ನು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022 ಎಂದು ಸದನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

ಈ ವಿಧೇಯಕ ಮೇಲ್ಮನೆಯಲ್ಲೂ ಅಂಗೀಕಾರವಾಗಿ ಘನ ರಾಜ್ಯಪಾಲರ ಅಂಕಿತದ ನಂತರ ಕಾನೂನಾಗಿದೆ. ಕನ್ನಡ ಭಾಷೆಯನ್ನು ಸಮರ್ಪಕವಾಗಿ ಬಳಕೆ ಮಾಡಬೇಕು ಎನ್ನುವ ಮೂಲ ಉದ್ದೇಶದಿಂದ ಸಿದ್ಧಪಡಿಸಿರುವ ಕಾನೂನಿನಲ್ಲಿ ಸರ್ಕಾರದ ಎಲ್ಲಾ ಕ್ಷೇತ್ರಗಳಲ್ಲಿ, ಸಚಿವಾಲಯಗಳಲ್ಲಿ, ನ್ಯಾಯಾಲಯಗಳಲ್ಲಿ, ಸ್ಥಳೀಯ ಸಂಘ-ಸಂಸ್ಥೆಗಳಲ್ಲಿ, ರಾಜ್ಯದಲ್ಲಿ ಇರುವ ಖಾಸಗಿ ವಲಯದಲ್ಲಿ ಕನ್ನಡವನ್ನು ಕಡ್ಡಾಯ ಮಾಡಲಾಗಿದೆ. ಕನ್ನಡ ಬಾರದವರಿಗೆ ಕನ್ನಡ ಕಲಿಸಿಯಾದರೂ ಕನ್ನಡದಲ್ಲಿಯೇ ವ್ಯವಹಾರ ನಡೆಸಬೇಕು, ಜೊತೆಗೆ ನ್ಯಾಯಾಲಯದಲ್ಲಿಯೂ ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡಬೇಕು ಎಂಬುವುದನ್ನು ಸ್ಪಷ್ಟಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ನೂತನವಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆಲವು ಸಚಿವರಿಗೆ ಹಾಗೂ ಶಾಸಕರಿಗೆ ಕನ್ನಡ ಬಾರದೇ ಇದ್ದ ಪಕ್ಷದಲ್ಲಿ ಕನ್ನಡ ಭಾಷೆಯನ್ನು ಕಲಿತಾದರೂ ಸದನದಲ್ಲಿ ಕನ್ನಡ ಮಾತನಾಡಬಹುದಾಗಿತ್ತು. ಆದರೆ ಕನ್ನಡ ಕಲಿಯುವ ಪ್ರಯತ್ನವನ್ನೂ ಮಾಡದಿರುವ ಜನಪ್ರತಿನಿಧಿಗಳ ಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ.

ಕನ್ನಡ ಇದ್ದರೆ ಮಾತ್ರ ಕರ್ನಾಟಕ ಇರಲಿದೆ. ನಾಡು ನುಡಿಯೇ ಇಲ್ಲದ ಮೇಲೆ ಎಲ್ಲಿಯ ಅಧಿಕಾರ..? ಎಲ್ಲಿಯ ಜನ ಸೇವೆ.. ? ಕನಿಷ್ಠ ಈ ಸತ್ಯವನ್ನು ಅರಿತಾದರೂ ಮುಂದಿನ ದಿನಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕು ಎನ್ನುವುದು ಕನ್ನಡ ಸಾಹಿತ್ಯ ಪರಿಷತ್ತಿನ ಕಳಕಳಿಯಾಗಿದೆ. ಅಧಿಕೃತವಾಗಿ ಕನ್ನಡ ಬಳಸದೇ ಇದ್ದ ಶಾಸಕರಿಗೆ ಕನ್ನಡ ಬಳಸದಿರುವ ಬಗ್ಗೆ ಕಾರಣ ಕೇಳುವ ಮೂಲಕ, ಒಂದು ವೇಳೆ ಅಂಥವರಿಗೆ ಕನ್ನಡ ಬಾರದಿದ್ದರೆ, ಪರಿಷತ್ತೇ ಕನ್ನಡ ಕಲಿಸುವ ಕೆಲಸವನ್ನು ಮಾಡುವುದು ಎಂದು ಜೋಶಿ ಕಟುವಾಗಿ ಹೇಳಿದ್ದಾರೆ.

### ಕನ್ನಡ ಬಳಕೆ ಕಾನೂನನ್ನು ಸದನವೇ ಅಂಗೀಕರಿಸಿದೆ...



**'ಕನ್ನಡ ಭಾಷೆಯನ್ನು ಸಮರ್ಪಕವಾಗಿ ಬಳಕೆ ಮಾಡಬೇಕು ಎನ್ನುವ ಮೂಲ ಉದ್ದೇಶದಿಂದ 'ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ವಿಧೇಯಕ 2022'ಅನ್ನು ರಾಜ್ಯದ ಎರಡೂ ಸದನಗಳಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ಈ ಕಾನೂನಿನ ಪ್ರಕಾರ ಎಲ್ಲಾ ಕ್ಷೇತ್ರಗಳಲ್ಲಿ, ಸಚಿವಾಲಯಗಳಲ್ಲಿ, ನ್ಯಾಯಾಲಯಗಳಲ್ಲಿ, ಸ್ಥಳೀಯ ಸಂಘ-ಸಂಸ್ಥೆಗಳಲ್ಲಿ, ರಾಜ್ಯದಲ್ಲಿ ಇರುವ ಖಾಸಗಿ ವಲಯದಲ್ಲಿ ಕನ್ನಡವನ್ನು ಕಡ್ಡಾಯ ಮಾಡಲಾಗಿದೆ'.**

**ನಾಡೋಜ ಡಾ. ಮಹೇಶ ಜೋಶಿ,** ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

## ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ್ ಅವರಿಗೆ ಅಭಿನಂದನೆಗಳ ಮಹಾಪೂರ



ಹರಪನಹಳ್ಳಿ, ಮೇ 25- ನೂತನ ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರಿಗೆ ಪಟ್ಟಣದ ವಿವಿಧ ಕಡೆಗಳಲ್ಲಿ ಕಾರ್ಯಕರ್ತರು, ಅಭಿಮಾನಿಗಳು, ಸಂಘ-ಸಂಸ್ಥೆಗಳಿಂದ ಅಭಿನಂದನೆಗಳ ಮಹಾಪೂರವೇ ಹರಿದುಬಂತು.

ಸ್ಥಳೀಯ ಕಾಶಿ ಸಂಗಮೇಶ್ವರ ಬಡಾವಣೆಯಲ್ಲಿರುವ ಅವರ ನಿವಾಸದಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ ಕಾರ್ಯಕರ್ತರು, ಅಭಿಮಾನಿಗಳು, ವಿವಿಧ ಇಲಾಖೆಯ ನೌಕರರು, ಗೌರವಿಸಿ ಸನ್ಮಾನಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿರುವ ಅಂಗವಿಕಲರ ಭವನದಲ್ಲಿ ವಿಕಲಚೇತನರ ಸಂಘದಿಂದ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಶಾಸಕರಾದ ಎಂ.ಪಿ.ಲತಾ ಅವರನ್ನು ಸನ್ಮಾನಿಸಿ, ಗೌರವಿಸಿದರು.

ಈ ವೇಳೆ ಉಪವಿಭಾಗಾಧಿಕಾರಿ ಟಿ.ವಿ. ಪ್ರಕಾಶ್, ಎಂಆರ್‌ಡಬ್ಲ್ಯೂ ಧನರಾಜ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಕಲ್ಮಠ, ಮುಖಂಡರಾದ ಬಿ.ಕೆ. ಪ್ರಕಾಶ್, ಎಂ.ವಿ. ಅಂಜಿನಪ್ಪ, ಟಿ. ವೆಂಕಟೇಶ, ಗಣೇಶ, ಗೊಂಗಡಿ ನಾಗರಾಜ, ಲಾಟಿ ದಾದಾಪೀರ್, ಟಿ. ಉಮಾಕಾಂತ, ಬಿ. ಅಂಜಿನಪ್ಪ, ಕಂಚಿಕೇರಿ ಜಯಲಕ್ಷ್ಮಿ, ಲಕ್ಷ್ಮಿ ಚಂದ್ರಶೇಖರ, ಉಮಾಶಂಕರ್, ಗುಂಡಗತ್ತಿ ನೇತ್ರಾವತಿ, ಕವಿತಾ ಸುರೇಶ್, ಚಂದ್ರಪ್ಪ, ರಾಮಪ್ಪ, ಮತ್ತೂರು ಬಸವರಾಜ, ನೀಲಪ್ಪ, ರೇವಣ್ಯನಾಯ್ಕ, ಪ್ರಸಾದ ಕವಾಡಿ, ಹರಿಯಮ್ಮನಹಳ್ಳಿ ಶಿವರಾಜ, ತೆಲಿಗಿ ಕೆ. ಯೋಗಿಶ, ಜಗದೀಶ, ಸುಮಾ, ಉಪ್ಪಾರ ಹನುಮಂತಪ್ಪ, ಜಿ.ಬಿ.ಟಿ. ಮಹೇಶ, ಇಬ್ರಾಹಿಂ, ಟಿ. ಮಂಜುನಾಥ ಸೇರಿದಂತೆ ಇತರರು ಇದ್ದರು.

## ಬ್ಯಾಂಕಿಂಗ್ ಹುದ್ದೆ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ಮೇ 25- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಬ್ಯಾಂಕ್ ಅಧಿಕಾರಿಗಳ, ಗುಮಾಸ್ತರ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ಆಯೋಜಿಸಲಾಗಿದೆ. ಆಸಕ್ತರು ಇದೇ ದಿನಾಂಕ 30 ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ವಿವರಕ್ಕೆ ದೂರವಾಣಿ : 0821-2515944.

## ಕುಂಬಳೂರಿನಲ್ಲಿ ವೆಂಕಟೇಶ್ವರ ಸ್ವಾಮಿ ದೇಗುಲ ಜೀರ್ಣೋದ್ಧಾರ



ಮಲೇಬೆನ್ನೂರು, ಮೇ 25- ಕುಂಬಳೂರು ಗ್ರಾಮದಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯ ದೇವಸ್ಥಾನದ ಜೀರ್ಣೋದ್ಧಾರದ ಅಂಗವಾಗಿ ಸೋಮವಾರ ನೂತನ ಶಿಲಾಮೂರ್ತಿಗೆ ಅಭಿಷೇಕ, ಮುತ್ತೈದೆಯರಿಂದ ಗಂಗಾಪೂಜೆ ಹಾಗೂ ಅರ್ಚಕ ಮುರುಳಿ ಅವರ ಪೌರೋಹಿತ್ಯದಲ್ಲಿ ಗಣಪತಿ ಹೋಮ, ದೃಷ್ಟಿ ಹೋಮ, ವಿಷ್ಣು ಹೋಮ, ಫಲ ಪಂಚಾಮೃತ, ಜೀವತತ್ಯಾನ್ಯಾಸ, ಮಹಾಪೂರ್ಣಾಹುತಿಯೊಂದಿಗೆ ಮಂಗಳಾರತಿ ನಡೆಯಿತು. ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.


**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್ವಿನ್ಸ್ ಕೆಫೆ'ಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 28 ವಿದ್ಯಾರ್ಹತೆ - ಎಸ್.ಎಸ್.ಎಲ್.ಸಿ , ಪಿ.ಯು.ಸಿ , ಪಾಸ್ / ಫೇಲ್ ಹೆಚ್ಚಿನ ಮಾತಿಗಾಗಿ ಸಂಪರ್ಕಿಸಿ ಆಂಜನೇಯ ಬಡಾವಣೆ ನೇತ್ರಾವತಿ ಹಾಸ್ಟೆಲ್ ರೋಡ್ ದಾವಣಗೆರೆ.
93804 69079, 84969 71882

**ಮನೆಯಲ್ಲಿ ನೀರಿನ ಲೀಕೇಜ್**
ಯಾವುದೇ ರೀತಿಯ ಮನೆಯ ಒಳಗಡೆ ಮತ್ತು ಹೊರಗಡೆಯಿಂದ ಮನೆಯ ಒಳಗಡೆ ನೀರು ಸೋರುತ್ತಿದ್ದರೆ (ಲೀಕೇಜ್) ಶಾಶ್ವತವಾಗಿ ನಿಲ್ಲಿಸಲಾಗುವುದು ಮತ್ತು 100% ಕೆಲಸದ ಗ್ಯಾರಂಟಿ ಇರುತ್ತದೆ.
96065 57066, 95913 10082

**ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ**
ಕಲೆಕ್ಷನ್ ಬಾಯ್ ಆಗಿ ಕೆಲಸ ಮಾಡಲು ಪಿಯುಸಿ ಪಾಸಾಗಿರುವವರು ಬೇಕಾಗಿದ್ದಾರೆ. ಬಯೋಡೇಟಾದೊಂದಿಗೆ **ಸಂಪರ್ಕಿಸಿ : ನವೋದಯ ಚಿಟ್ ಫಂಡ್ಸ್** # 34, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ಸರ್ಕಲ್ ಬಳಿ, ನಿಟುವಳ್ಳಿ ರಸ್ತೆ, ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆ ಸುತ್ತಮುತ್ತ ಹೊಸ ಬಡಾವಣೆಗಲ್ಲಿ 30x50 ಪೂರ್ವ, 30x50 ಉತ್ತರ, 30x40 ಪಶ್ಚಿಮ, 30x40 ಪೂರ್ವ-ದಕ್ಷಿಣ ಕಾರ್ನರ್, 30x40 ಪಶ್ಚಿಮ-ದಕ್ಷಿಣ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರರ ಮತ್ತು ಡಾಲರ್ಸ್‌ಲೇಔಟ್ ಮಧ್ಯೆ ಪೂರ್ವ 30x40, ಪಶ್ಚಿಮ 30x45, ಹಳೆ ಬನಶಂಕರಿ ಬಡಾವಣೆ ಪೂರ್ವ 40x40, ಪಶ್ಚಿಮ 30x45, 40x78, (ಅಕ್ಕ-ಪಕ್ಕ) (60 ಅಡಿ ರಸ್ತೆ) ಶಿವ-ಪಾರ್ವತಿ ಬಡಾವಣೆ ಪೂರ್ವ 30x35, 40x60.
ಐಗೂರು ವಿಜಯಕುಮಾರ
99457 02495

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.
ಫೋ. : 98445 67456

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಹೊರವಲಯದ ಕುಂದುವಾಡ ಹತ್ತಿರ ಇರುವ ತುಂಗಭದ್ರಾ ಬಡಾವಣೆಯಲ್ಲಿ 20x30 ಅಳತೆಯ, ಉತ್ತರ ಮುಖವುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
97416 84666, 82177 98233

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೇರ್ ಡ್ಯೂ ಪ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ, 70x62 Corner, 30x55 South, 40x40 South, 30x40 North,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟು ಮಾರಾಟಕ್ಕಿದೆ**
ಮಹಾಲಕ್ಷ್ಮಿ ಬಡಾವಣೆಯ ಪೂರ್ವ ದಿಕ್ಕಿನ 40x50 ಅಳತೆಯ ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ :
78998 38164
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**WANTED**
PHARMASIST
CONTACT :
SHILPA DIAGNOSTICS PVT LTD.,
MCC B BLOCK, NEAR SWIMMING POOL, DAVANGERE.
98440 65638

**ಬೇಕಾಗಿದ್ದಾರೆ**
ವೀರಶೈ ಖಾನವಳಿ ಕ್ಲೀನಿಂಗ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಬೇಕಾಗಿದ್ದಾರೆ.
99017 70830, 99458 29046

**ತಕ್ಷಣ ಬೇಕಾಗಿದ್ದಾರೆ**
ಸುಬ್ರಹ್ಮಣ್ಯ ಗ್ಯಾಸ್ ಏಜೆನ್ಸಿಯಲ್ಲಿ ಸಿಲಿಂಡರ್ ಡೆಲಿವರಿ ಬಾಯ್, ಅನುಭವವುಳ್ಳವರು ಹಾಗೂ ಡ್ರೈವಿಂಗ್ ಲೆಸೆನ್ಸ್ ಇದ್ದವರು ಬೇಕಾಗಿದ್ದಾರೆ. 96/1, Ist Main ರೋಡ್, Ist Cross, KTJ ನಗರ
99805 51500, 08192 - 254121
ಕೆ.ಎಂ. ಸಿದ್ದೇಶ್

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನದ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ ವಿಜನ್ ಇಂಟರ್‌ನ್ಯಾಷನಲ್ ಸ್ಕೂಲ್ ಎದುರುಗಡೆ 30x40, 30x40 East ಅಕ್ಕ-ಪಕ್ಕ, Rate - 2250/- ಸೈಟುಗಳು ಮಾರಾಟಕ್ಕಿವೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 East, 30x40 West, 20x40 West, 20x30 East, 20x30 South, 20x30 Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ನಂದಗೋಕುಲ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ - ಪ್ರೌಢಶಾಲೆ**
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಹೊಸ ಆರ್ ಟಿಓ ಕಛೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
**ಶಿಕ್ಷಕರು ಬೇಕಾಗಿದ್ದಾರೆ**
B.A., B.Ed., (PCM / CBZ) ಆಗಿರುವ ಶಿಕ್ಷಕರು ಹಾಗೂ Part-time Driver ಬೇಕಾಗಿದ್ದಾರೆ.
ಸಂಪರ್ಕಿಸಿ : 99640 17729

**ಬೇಕಾಗಿದ್ದಾರೆ**
Tally ಆಗಿರುವ ಮಹಿಳೆಯರು ಬೇಕಾಗಿದ್ದಾರೆ. (ಅನುಭವವಿರುವವರಿಗೆ ಆದ್ಯತೆ )
ಕಿಸಾನ್ ವರ್ಲ್ಡ್, ಹದಡಿ ರೋಡ್, ದಾವಣಗೆರೆ. ಸಂಪರ್ಕಿಸಿ :
99642 12379

**WANTED TEACHERS**
BA, B.Ed - Hindi
B.Sc B.Ed - PCM/CBZ
D.Ed, NTC. Contact immediately. Prefrence will be given to lady candidates.
Vinayaka convent
Ganeshpet, Kalikadevi Road. Dvg.

**ಬೇಕಾಗಿದ್ದಾರೆ**
ಏಜೆನ್ಸಿಯಲ್ಲಿ ಡೆಲಿವರಿ ಕೊಡಲು ಡೆಲಿವರಿ ಹುಡುಗರು ಮತ್ತು ಡ್ರೈವರ್ ಬೇಕಾಗಿದ್ದಾರೆ.
94485 34028, 95354 84774

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ :
99001 42052, 90082 28222

**ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ**
ಕನಿಷ್ಟ ಓದಲು ಮತ್ತು ಬರೆಯಲು ಹಾಗೂ ಅನುಭವ ಇರುವ 25 ವರ್ಷದಿಂದ 40 ವರ್ಷದ ಒಳಗಿನ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ ಹಾಗೂ ಸೌಲಭ್ಯಗಳು. ಸಂಪರ್ಕಿಸಿ :
63621 44130, 73539 50027
SRV ಅಸೋಸಿಯೇಟ್ಸ್

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**LADY TEACHERS WANTED**
B.Sc B.Ed -2 B.A B.Ed-2 D.Ed - 2
Contact to Vinayaka Public School Kondajji Road. Near Devanagari Gas Godown Dvg.
95356 10817

**TO- LET**
MAMA'S JOINT ROAD, SHANKAR PLAZA, 1ST FLOOR, 1100 SQFT.
94481 38956
94831 92504

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಹೊರವಲಯದ ಆವರಗೆರೆ ಹೊಂಡಾ ಷೋ ರೂಂ ಪಕ್ಕದಲ್ಲಿ NH-4 ಗೆ ಹೊಂದಿಕೊಂಡಿರುವ 46x70 ಅಡಿ ಅಳತೆಯ ಉತ್ತರ ದಿಕ್ಕಿನ ಕಡೆ ಸೈಟು ಮಾರಾಟಕ್ಕಿದೆ.
73385 91185

**ಮನೆ ಕ್ರಯ ಪತ್ರ ಕಳೆದಿದೆ**
ದಿನಾಂಕ 12.5.2023ರಂದು ದಯಾನಂದ ಎಂಬ ಹೆಸರಿನಲ್ಲಿರುವ ಮನೆಯ ಕ್ರಯಪತ್ರ ಡೋರ್ ನಂ. 963/1 ಗಿರಿಜಾ ನಿಲಯ, 1ನ ಮೇನ್, 2ನೇ ಕ್ರಾಸ್, ವಿನೋಬನಗರ ದಾವಣಗೆರೆ ಮನೆ ಬದಲಾವಣೆ ಮಾಡುವಾಗ ಬಿದ್ದು ಕಳೆದು ಹೋಗಿದೆ. ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ನಂಬರಿಗೆ ತಿಳಿಸಬೇಕಾಗಿ ವಿನಂತಿ.
ದಯಾನಂದ- 98455 09877

**ಮನೆ ಬಾಡಿಗೆಗಿದೆ**
ದಾವಣಗೆರೆ ಎಂಸಿಸಿ ಎ ಬ್ಲಾಕ್ 10ನೇ ಮುಖ್ಯ ರಸ್ತೆ, 2ನೇ ಕ್ರಾಸ್‌ನಲ್ಲಿ ಗ್ರೌಂಡ್ ಫ್ಲೋರ್ 3BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
ಮೊ : 94492 87516

**ನೇತ್ರದಾನ ಮಹಾದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಉದ್ಯೋಗ ಅವಕಾಶ**
ನಿಮ್ಮ ಮನೆಯಿಂದಲೇ ದಿನಕ್ಕೆ 2 ಗಂಟೆ ಕೆಲಸವನ್ನು ಬಿಡುವಿನ ವೇಳೆಯಲ್ಲಿ ಮಾಡಿ ತಿಂಗಳಿಗೆ 15,000/- ದಿಂದ 20,000/- ಸಂಪಾದಿಸಿರಿ.
89714 63581, 81055 03664

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. PUC or Any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577002.

**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ, ಸ್ವೀಟ್ ಕೌಂಟರ್ ನಿರ್ವಹಣೆಗೆ ಮತ್ತು ಅಡುಗೆ ಹೆಲ್ಪರ್ ಕೆಲಸಕ್ಕೆ ನುರಿತ ಯುವಕ, ಯುವತಿಯರು ಬೇಕಾಗಿದ್ದಾರೆ.
95388 96927

**ಸೈಟು ಮಾರಾಟಕ್ಕಿದೆ**
ನಿಟುವಳ್ಳಿಯಿಂದ ಎಸ್.ಎಸ್. ಹೈಟೆಕ್ ಆಸ್ಪತ್ರೆಗೆ ಹೋಗುವ 60 ಅಡಿ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಪಕ್ಕದಲ್ಲಿರುವ ಸೈಟ್ 37.5X90 = 335.4 sq.ft ಮಾರಾಟಕ್ಕಿದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
81973 00410

**ಆಫೀಸ್ ಕೆಲಸ ಶಿಕ್ಷಣ ಕೇಂದ್ರ**
ಬೆ. 10 ರಿಂದ ಮ 2ರವರೆಗೆ ಆಫೀಸ್ ಕೆಲಸಕ್ಕೆ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. PUC or Degree ತಿಂಗಳ ವೇತನ 6,000/- 3 ತಿಂಗಳ ನಂತರ 8,000/- ರೂ.ಗಳು ನಿಗದಿ.
ಸಂಪರ್ಕಿಸಿ : 97436 77692
ನಿಟುವಳ್ಳಿ, ದಾವಣಗೆರೆ.

**WANTED TEACHERS**
Eduplanet International School, Davangere.
2 years Experiance
BSc., B.Ed., B.P.Ed.,
7676181417, 7019932983

**SITE FOR SALE**
ಜೆ.ಹೆಚ್ ಪಟೇಲ್ ಬಡಾವಣೆ ಪೂರ್ವ ದಿಕ್ಕಿನ 20x30 ನಿವೇಶನ ಮಾರಾಟಕ್ಕಿದೆ.
89707 77554

**WANTED TEACHERS**
Kids Campus International Pre school
Davangere
Wanted : Teachers for playgroup, Pre-kg, Lkg and Ukg
Fluency in English
99003 78196

**ನೇರ ಪರೀಕ್ಷೆಗಳು**
SSLC, PUC, BA, B.Com, NTC, BBA, MBA (ALL) B.Tech, Diploma, ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಫೋ. : 86602 35013


**WANTED FEMALE TEACHERS**
B.Sc B.Ed-2. B.A B. Ed-2 D.Ed -2 NTC -2
contact immediately to secretary vinayaka convent kalikadevi road dvg.
95356 10817, 88920 07561

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ 12.000, ಊಟ, ರೂಂ ಉಚಿತ, ವಯಸ್ಸು 18 ರಿಂದ 30 ವರ್ಷ 12 ಗಂಟೆ ಕೆಲಸ. ಸಂಪರ್ಕಿಸಿ.
9740098047, 9740098064

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# 'ದಿ ಕೇರಳ ಸ್ಟೋರಿ' ವೀಕ್ಷಿಸಲು ಚಿತ್ರಮಂದಿರಕ್ಕೆ ವಿದ್ಯಾರ್ಥಿಗಳ ಲಗ್ಗೆ




ದಾವಣಗೆರೆ, ಮೇ 25- ಪ್ರೇರಣಾ ಯುವ ಸಂಸ್ಥೆ ವತಿಯಿಂದ ಗುರುವಾರ ನಗರದ ತ್ರಿಶೂಲ್ ಚಿತ್ರಮಂದಿರದಲ್ಲಿ 'ದಿ ಕೇರಳ ಸ್ಟೋರಿ' ಚಿತ್ರವನ್ನು ಉಚಿತವಾಗಿ ವೀಕ್ಷಿಸಲು ವಿದ್ಯಾರ್ಥಿನಿಯರಿಗೆ ಅವಕಾಶ ಕಲ್ಪಿಸಿಕೊಡಲಾಗಿತ್ತು.

ಬೆಳಿಗ್ಗೆ 11 ಗಂಟೆಯ ಪ್ರಥಮ ಶೋಗೆ 10ರ ವೇಳೆಗೇ ಸಾವಿರಾರು ವಿದ್ಯಾರ್ಥಿನಿಯರು ಚಿತ್ರ ವೀಕ್ಷಿಸಲು ಚಿತ್ರಮಂದಿರದ ಬಳಿ ಜಮಾಯಿಸಿದ್ದರು. 700 ಆಸನಗಳ ಚಿತ್ರಮಂದಿರ ಪೂರ್ಣ ತುಂಬಿತ್ತು. 150ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಕೆಳಗಡೆಯೇ ಕುಳಿತು ಚಿತ್ರ ವೀಕ್ಷಿಸಿದರೆ, ಹೊರ ಭಾಗದಲ್ಲಿದ್ದವರಿಗೆ ಮತ್ತೊಂದು ಶೋಗೆ ಬರುವಂತೆ ಹೇಳಿ ಕಳುಹಿಸಲಾಗುತ್ತಿತ್ತು.

ಮಧ್ಯಾಹ್ನದ ಶೋ ಸಹ ತುಂಬಿದ್ದರಿಂದ ಪ್ರೇರಣಾ ಯುವ ಸಂಸ್ಥೆಯ ಅಧ್ಯಕ್ಷ ಎಸ್.ಟಿ. ವೀರೇಶ್ ಅವರು, ಸಂಜೆಯ ಶೋಗೆ ಸಹ ಟಿಕೆಟ್ ಕೊಡಿಸಿ ಅವಕಾಶ ಕಲ್ಪಿಸಿದ್ದರೂ. ಅದೂ ಸಹ ಹೌಸ್ ಫುಲ್ ಆಗಿತ್ತು.

ವಿದ್ಯಾರ್ಥಿನಿಯರು ಹಾಗೂ ಮಹಿಳೆಯರಿಂದ ಚಿತ್ರ ವೀಕ್ಷಿಸಲು ಹೆಚ್ಚಿನ ಉತ್ಸುಕತೆ ವ್ಯಕ್ತವಾಗುತ್ತಿರುವುದರಿಂದ ಮುಂದಿನ ದಿನಗಳಲ್ಲೂ ಸಹ ಉಚಿತವಾಗಿ ಚಿತ್ರ ವೀಕ್ಷಿಸಲು ಅವಕಾಶ ಕಲ್ಪಿಸಿಕೊಡಲಾಗುವುದು ಎಂದು ಹೇಳಿದರು.

ಚಿತ್ರವು ಕೇರಳದಲ್ಲಿ ನಡೆದ ನೈಜ ಘಟನೆ ಆಧಾರಿತವಾಗಿದೆಯಾದರೂ, ಇದು ಕೇವಲ ಕೇರಳದ ಕಥೆಯಲ್ಲ. ದೇಶ, ರಾಜ್ಯ ಸೇರಿದಂತೆ ದಾವಣಗೆರೆಯಲ್ಲಿಯೂ ಲವ್ ಜಿಹಾದ್ ಗೆ ಮುಗ್ಧ ಹಿಂದೂ ವಿದ್ಯಾರ್ಥಿನಿಯರು ಬಲಿಯಾಗುತ್ತಿದ್ದಾರೆ. ಅವರನ್ನು ಜಾಗೃತಿಗೊಳಿಸಲು ದಿ ಕೇರಳ ಸ್ಟೋರಿ ಉತ್ತಮ ವೇದಿಕೆಯಾಗಿದೆ. ಈ ನಿಟ್ಟಿನಲ್ಲಿ ಪ್ರೇರಣಾ ಯುವ ಸಂಸ್ಥೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಆಶ್ರಯದಲ್ಲಿ ಚಿತ್ರ ಪ್ರದರ್ಶನಕ್ಕೆ ಉಚಿತವಾಗಿ ಅವಕಾಶ ಕಲ್ಪಿಸಲಾಗಿದೆ ಎಂದು ಎಸ್.ಟಿ. ವೀರೇಶ್ ಹೇಳಿದರು.

ಲವ್ ಜಿಹಾದ್ ಎಂಬ ಸಾಮಾಜಿಕ ಪಿಡುಗು ದೇಶಕ್ಕೆ ಮಾರಕವಾಗಿದೆ. ಮುಗ್ಧ ಹುಡುಗಿಯರು ಲವ್ ಜಿಹಾದ್‌ಗೆ ಬಲಿಯಾಗಿ ಜೀವನ ಪೂರ್ತಿ ಹಿಂಸೆ ಪಡುತ್ತಿದ್ದಾರೆ. ಇದನ್ನು ತಡೆಯಲು ಹಿಂದೂ ಸಂಘಟನೆಗಳು ಸಾಕಷ್ಟು ಹೋರಾಟ ನಡೆಸಿವೆ. ಆದರೆ ಅದು ಜನರಿಗೆ ತಲುಪಿರಲಿಲ್ಲ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಬಾಡದ ಆನಂದರಾಜ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಟಿ.ಪಾಟೀಲ್ ಹಾಗು ಇತರರು ಈ ಸಂದರ್ಭದಲ್ಲಿದ್ದರು.

# ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನಕ್ಕೆ ಬಂಜಾರ ಸಮುದಾಯ ಆಗ್ರಹ



**ಹೊನ್ನಾಳಿ**

ಹೊನ್ನಾಳಿ, ಮೇ 25- ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಬಂಜಾರ ಸಮುದಾಯದಿಂದ 4 ಜನ ಅಲ್ಪ ಮತಗಳ ಅಂತರದಿಂದ ಸೋತಿದ್ದು, ರುದ್ರಪ್ಪ ಲಮಾಣಿ ಅವರೊಬ್ಬರೇ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಸಚಿವರನ್ನಾಗಿ ಮಾಡುವಂತೆ ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕುಗಳ ಬಂಜಾರ ಸಮುದಾಯದ ಮುಖಂಡರು ಆಗ್ರಹಿಸಿದರು.

ಬುಧವಾರ ಹೊನ್ನಾಳಿ ಪ್ರವಾಸಿ ಮಂದಿರದಲ್ಲಿ ಅವಳಿ ತಾಲ್ಲೂಕುಗಳ ಬಂಜಾರ ಸಮುದಾಯದ ಮುಖಂಡರು ಕೆ.ಪಿ.ಸಿ.ಸಿ. ಸದಸ್ಯ ಹಾಗೂ ಹಿರಿಯ ಮುಖಂಡ ಡಾ.ಈಶ್ವರನಾಯ್ಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಒಳ ಮೀಸಲಾತಿ ವಿಚಾರದಲ್ಲಿ ರಾಜ್ಯಾದ್ಯಂತ ಬಂಜಾರ ಸಮುದಾಯ ಬಿಜೆಪಿಯ ಧೋರಣೆ ಖಂಡಿಸಿ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲಿಸಿದ್ದರಿಂದ ರಾಜ್ಯದಲ್ಲಿ ಸ್ಪಷ್ಟ ಬಹುಮತ ಪಡೆದು, ಅಧಿಕಾರಕ್ಕೆ ಬರುವಂತಾಗಿದೆ. ಕಾಂಗ್ರೆಸ್‌ನ ಗೆಲುವಿನಲ್ಲಿ ಬಂಜಾರ ಸಮುದಾಯದ ಕೊಡುಗೆ ಅಪಾರವಾಗಿದ್ದು, ಈ ಹಿನ್ನೆಲೆಯಲ್ಲಿ ಬಂಜಾರ ಸಮುದಾಯಕ್ಕೆ ಸಚಿವ ಸ್ಥಾನ ನೀಡಲೇಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಇದರೆ ಜೊತೆಗೆ ವಿಧಾನಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಅವರಿಗೆ ಕೂಡ ಸಚಿವ ಸ್ಥಾನ ನೀಡಬೇಕು ಎಂದರು.

ರುದ್ರಪ್ಪ ಲಮಾಣಿ ಈ ಹಿಂದೆ ಮುಜರಾಯಿ ಖಾತೆ ಸಚಿವರಾಗಿ ಉತ್ತಮ ಸೇವೆ ಸಲ್ಲಿಸಿದ್ದು, ಜೊತೆಗೆ ಇಡೀ ಬಂಜಾರ ಸಮುದಾಯ ಪರಮ ಪವಿತ್ರ ಕ್ಷೇತ್ರವಾದ ಸಂತ ಸೇವಾಲಾಲ್ ಜನ್ಮ ಸ್ಥಳವಾದ ಸೂರಗೊಂಡನಕೊಪ್ಪದ ಸಮಗ್ರ ಅಭಿವೃದ್ದಿಯಲ್ಲಿ ಕೂಡ ಅವರ ಸೇವೆ ಅಪಾರವಾಗಿದೆ. ಈ ಬಾರಿ ರುದ್ರಪ್ಪ ಲಮಾಣಿಯವರಿಗೆ ಸಚಿವರಾಗಿ ಪ್ರಮುಖ ಖಾತೆಯನ್ನು ಸರ್ಕಾರ ಕೊಡಲೇಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಂಜಾರ ಸಮುದಾಯದ ಮುಖಂಡರಾದ ಅಂಜುನಾಯ್ಕ, ಶಿವರಾಂ ನಾಯ್ಕ, ಪೀರ್ಯಾನಾಯ್ಕ, ನ್ಯಾಮತಿ ತಾಲ್ಲೂಕು ಬಂಜಾರ ಸಂಘದ ಅಧ್ಯಕ್ಷ ಸೂರ್ಯನಾಯ್ಕ, ಪ್ರಭುದೇವ ನಾಯ್ಕ, ಸೋಮ್ಲಾನಾಯ್ಕ, ಕುಬೇರ ನಾಯ್ಕ ಸೇರಿದಂತೆ ಬಂಜಾರ ಸಮುದಾಯದ ಅನೇಕ ಮುಖಂಡರು ಉಪಸ್ಥಿತರಿದ್ದರು.

## ಸಾದರ ಸಾಧನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 25- 2022-23 ನೇ ಸಾಲಿನ ಎಸ್ಸೆಸ್ಸೆಲ್ಸಿ (ಸ್ಟೇಟ್, ಸಿಬಿಎಸ್‌ಇ, ಐಸಿಎಸ್‌ಇ) ಪಿಯುಸಿ ವಿಜ್ಞಾನ, ಕಲಾ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಶೇ. 85 ಕ್ಕೂ ಹೆಚ್ಚು ಅಂಕ ಗಳಿಸಿದ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಕರ್ನಾಟಕ ರಾಜ್ಯ ಮಟ್ಟದ ಸಾಧು ಲಿಂಗಾಯತ ಸಮಾಜ ಪ್ರತಿಭಾ ಪುರಸ್ಕಾರ ನೀಡಲು ಸಾದರ ನೌಕರರ ಬಳಗ ಮುಂದಾಗಿದೆ. ಆಸಕ್ತ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಇದೇ ದಿನಾಂಕ 31 ರೊಳಗಾಗಿ ಅರ್ಜಿಯನ್ನು ಕೆ. ನಾಗಪ್ಪ, ಅಧ್ಯಕ್ಷರು, ಸಾದರ ನೌಕರರ ಬಳಗ, ಸಾದರ ಪತ್ತಿನ ಸಹಕಾರ ಬ್ಯಾಂಕ್, ಡೋರ್ ನಂ. 1645/145, ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆ ಇವರಿಗೆ ಸಲ್ಲಿಸಬೇಕು.

ವಿವರಕ್ಕೆ ಸಂಪರ್ಕಿಸುವ ಮೊಬೈಲ್ : 9844369744, 9448439662, 9844501366, 9243312478, 9886339984.

## ಎಸ್ಸೆಸ್ಸೆಂಗೆ ಕ್ಯಾಬಿನೆಟ್ ದರ್ಜೆ ಸ್ಥಾನಕ್ಕೆ ಒತ್ತಾಯಿಸಿ ಪ್ರತಿಭಟನೆ



ದಾವಣಗೆರೆ, ಮೇ 25- ಉತ್ತರ ವಿಧಾನಸಭಾ ಕ್ಷೇತ್ರದ ನೂತನ ಶಾಸಕ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಂಪುಟ ದರ್ಜೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿ ನಗರದ ಅರಳಿಮರ ವೃತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಇಂದು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಪಾಲಿಕೆ ಸದಸ್ಯ ಅಹ್ಮದ್ ಕಬೀರ್ ಖಾನ್ ಮಾತನಾಡಿ, ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಇಂಧನ ಅಥವಾ ಗೃಹ ಖಾತೆ ನೀಡಬೇಕು ಎಂದು ಪಕ್ಷದ ಹೈಕಮಾಂಡ್ ಗೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಫಾರೂಕ್, ಅಬ್ದುಲ್ ಗನಿ, ಶರ್ಫುಲ್ ಬಿಲಾಲ್, ಲಿಯಾಖತ್, ಬಾಷಾ, ಜಬೀ, ಆಫ್ರಿದಿ, ಇಮ್ತಿಯಾಜ್, ಫರಿದಾ ಖಾನ್, ಜಾಫರ್, ಖಾಜಾ, ಜಮಾಲುದ್ದೀನ್ ಸೇರಿದಂತೆ ಅನೇಕ ಕಾರ್ಯಕರ್ತರು, ಮುಖಂಡರು ಪಾಲ್ಗೊಂಡಿದ್ದರು.

## ನಿರುದ್ಯೋಗಿಗಳಿಗೆಲ್ಲರಿಗೂ ನಿರುದ್ಯೋಗ ಭತ್ಯೆ ನೀಡುವಂತೆ ಆಗ್ರಹಿಸಿ ಪ್ರತಿಭಟನೆ

ದಾವಣಗೆರೆ, ಮೇ 25- ಕಾಂಗ್ರೆಸ್ ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಯಂತೆ ಎಲ್ಲಾ ನಿರುದ್ಯೋಗಿಗಳಿಗೂ ನಿರುದ್ಯೋಗ ಭತ್ಯೆ ನೀಡುವಂತೆ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಜೇಶನ್ (ಎಐಡಿವೈಓ) ನಗರದ ಮಹಾತ್ಮಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿತು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಪರಶುರಾಮ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಪದವಿ ಮತ್ತು ಡಿಪ್ಲೋಮಾ ಪಡೆದ ನಿರುದ್ಯೋಗಿಗಳಿಗೆ ಪ್ರತಿ ತಿಂಗಳ ನಿರುದ್ಯೋಗ ಭತ್ಯೆ ನೀಡುವ ಯುವ ನಿಧಿ ಯೋಜನೆಯ ಪ್ರಕಾರ 2022-23 ನೇ ಶೈಕ್ಷಣಿಕ ಸಾಲಿನಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮಾತ್ರ ನಿರುದ್ಯೋಗ ಭತ್ಯೆ ಅದು ಎರಡು ವರ್ಷಗಳ ಅವಧಿಗೆ ಮಾತ್ರ ನೀಡಲಾಗುವುದು ಎಂಬ ಷರತ್ತು ವಿಧಿಸಲಾಗಿದೆ. ಹಾಗಾದರೆ ಈ ಅವಧಿಗೂ ಮುನ್ನ ಪದವಿ, ಡಿಪ್ಲೋಮಾ ಮುಗಿಸಿ, ಉದ್ಯೋಗಕ್ಕಾಗಿ ಅಲೆಯುತ್ತಿರುವ ಯುವಜನರು ನಿರುದ್ಯೋಗಿಗಳು ಅಲ್ಲವೇ ? ಎಂದು ಪ್ರಶ್ನಿಸಿದರು. ಶಶಿಕುಮಾರ್ ಮಾತನಾಡಿ, ನಿರುದ್ಯೋಗ ಭತ್ಯೆ ನೀಡುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ಸರ್ಕಾರ ನಿರುದ್ಯೋಗಿ ಎಂಬ ಪದವನ್ನು ತನ್ನ ಮನಸೋ ಇಚ್ಛೆ ವ್ಯಾಖ್ಯಾನಿಸಿಕೊಂಡು ಅವರಿಗೆ ಮಾತ್ರ ನಿರುದ್ಯೋಗ ಭತ್ಯೆ ನೀಡುತ್ತೇವೆ ಎನ್ನುವುದು ನಾಡಿನ ಯುವ ಜನರಿಗೆ ಬಗೆಯುವ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ನಗರದಲ್ಲಿ ಇಂದು

ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ಉಪನ್ಯಾಸ ಕೊಠಡಿಯಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಅಧ್ಯಕ್ಷತೆಯನ್ನು ಎನ್. ಪರಶುರಾಮನಗೌಡ ವಹಿಸುವರು. ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ಮುಖ್ಯ ಅತಿಥಿಗಳಾದ ಪ್ರೊ. ಗೋಪಿನಾಥ ಎಸ್.ಎಂ. ನೆರವೇರಿಸುವರು. ಪ್ರಾಚಾರ್ಯ ಡಾ. ದಿವಾಕರ ನಾಯ್ಕ್ ಕೆ.ಎಸ್. ಉಪಸ್ಥಿತರಿರುವರು.

## ನೂತನ ಸರ್ಕಾರದ ಸೌಲಭ್ಯ ಪಡೆಯಲು ತಕ್ಷಣವೇ ದಾಖಲೆಗಳನ್ನು ಕೊಡಲು ಮನವಿ



ದಾವಣಗೆರೆ, ಮೇ 25- ಜೀವನೋಪಾಯಕ್ಕೆ ಸಹಕಾರಿಯಾದಂತಹ ಆಹಾರ ಹಾಗೂ ನಾಗರಿಕ ಇಲಾಖೆಯು ನೀಡುವ ಬಿ.ಪಿ.ಎಲ್. ಪಡಿತರ ಕಾರ್ಡ್ ತುಂಬಾ ಮಹತ್ವವಾಗಿದೆ. ಸರ್ಕಾರದ ಮುಂದಿನ ಯೋಜನೆಗಳಾದ ಅನೇಕ ಭಾಗ್ಯಗಳು, ಗ್ಯಾರಂಟಿ ಸ್ಕೀಮ್‌ನ ಅಡಿಯಲ್ಲಿ ಸವಲತ್ತುಗಳನ್ನು ಪಡೆಯಲು ಬಿ.ಪಿ.ಎಲ್. ಕಾರ್ಡ್ ಅಗತ್ಯವಾಗಿದೆ. ಈಗಾಗಲೇ ಬಂದಿರುವ ಅರ್ಜಿಗಳು, ತಿದ್ದುಪಡಿಯ ಅಡಿಯಲ್ಲಿ ಬಂದಿರುವ ಅರ್ಜಿಗಳು ಹಾಗೂ ಹೊಸ ಬೇಡಿಕೆ ಅರ್ಜಿಗಳನ್ನು ಶೀಘ್ರವೇ ವಿತರಿಸಲು ಕ್ರಮ ಕೈಗೊಂಡು, ಜನಸಾಮಾನ್ಯರಿಗೆ ಸವಲತ್ತು ನೀಡಲು ಸಹಕಾರ ಮಾಡಬೇಕೆಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ್ ಎಸ್., ಪಾಲಿಕೆ ಸದಸ್ಯರಾದ ಮಂಜುನಾಥ ಗಡಿಗುಡಾಳ್, ಎ. ನಾಗರಾಜ್ ಅವರುಗಳು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಿಗೆ ಮನವಿ ಮಾಡಿದ್ದಾರೆ.

## ಓದುಗರ ಪತ್ರ

### ಪಾಲಿಕೆ, ಶ್ರೀನಿವಾಸ್‌ಗೆ ಧನ್ಯವಾದ..

**ಮಾನ್ಯರೇ,**

ದಿನಾಂಕ 19-5-2023 ರಂದು ಸೇಸ್ಯಾಮ್ ಲೇ-ಔಟ್‌ನಲ್ಲಿ ಕಸ ಹಾಕುತ್ತಿರುವುದನ್ನು ಬಡಾವಣೆ ನಿವಾಸಿಗಳು ನೋಡಿ ತಕ್ಷಣ dvgcoa.karnatakasmartcity.in ಪೋರ್ಟಲ್‌ನಲ್ಲಿ ದೂರು ನೀಡಿದೆವು. ದೂರು ನೀಡಿದ ದಿನವೇ ಕರೆಮಾಡಿ ನಮಗೆ ತಿಳಿಸಿದರು.

ಮರುದಿನವೇ ಅಂದರೆ 20-5-2023ರ ಬೆಳಿಗ್ಗೆ 7 ಗಂಟೆಗೆ ಕಸವನ್ನು ತೆಗೆದು ಸ್ವಚ್ಛ ಮಾಡಿದ್ದಾರೆ. ಶೀಘ್ರ ಹಾಗೂ ಸ್ಫೂರ್ತಿದಾಯಕವಾಗಿ ನಮಗೆ ಸ್ಪಂದಿಸಿದ ಕಾರ್ಪೊರೇಟರ್ ಜೆ.ಎನ್. ಶ್ರೀನಿವಾಸ್ ಅವರಿಗೆ ಮತ್ತು ಪಾಲಿಕೆ ಸಿಬ್ಬಂದಿಗಳಿಗೆ ಸೇಸ್ಯಾಮ್ ಬಡಾವಣೆ ನಿವಾಸಿಗಳಿಂದ ಹೃದಯಪೂರ್ವಕ ಧನ್ಯವಾದಗಳು.

**- ಮೊಹಮದ್ ಸಲೀಮ್**, ಬಡಾವಣೆ ನಿವಾಸಿ

### ಪಾದಚಾರಿಗಳಿಗೆ ಅನುಕೂಲ ಮಾಡಿರಿ..

**ಮಾನ್ಯರೇ,**

ನಗರದ ಅಶೋಕ ಚಿತ್ರಮಂದಿರದ ಬಳಿ ಅಂಡರ್ ಪಾಸ್ ಆರಂಭವಾದ ನಂತರ ರೈಲ್ವೇ ಗೇಟ್ ಮುಚ್ಚಲಾಗಿದ್ದು, ಅಲ್ಲಿ ಅಡ್ಡಾಡುವ ಪಾದಚಾರಿಗಳಿಗೆ ತೊಂದರೆ ಉಂಟಾಗಿದೆ. ದೇವಸ್ಥಾನಕ್ಕೆ ಬರುವ ಭಕ್ತಾದಿಗಳೂ ಸೇರಿದಂತೆ, ವಯಸ್ಸಾದವರೂ ಗೇಟಿನಲ್ಲಿ ಬಗ್ಗಿ ಬರಬೇಕಾಗಿದೆ. ಆದ್ದರಿಂದ ಬಹಳ ತೊಂದರೆ ಉಂಟಾಗಿದೆ. ಈ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸಮಸ್ಯೆ ಬಗೆಹರಿಸುವಂತೆ ಕೋರುತ್ತೇನೆ.

**ಜೆ.ಸೋಮನಾಥ್**, ಸಮಾಜ ಸೇವಕರು, ದಾವಣಗೆರೆ.

# ಮಳೆ ಹಾನಿ ಪರಿಹಾರಕ್ಕೆ ಆಗ್ರಹಿಸಿ ರೈತರ ಪ್ರತಿಭಟನೆ

ದಾವಣಗೆರೆ, ಮೇ 25- ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಬೆಂಬಲ ಬೆಲೆಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಬೋನಸ್ ಘೋಷಣೆ ಮಾಡಬೇಕೆಂದು, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಬೆಂಬಲ ಬೆಲೆಗೆ ಸುಗ್ರೀವಾಜ್ಞೆಯನ್ನು ಹೊರಡಿಸಿ ರಾಜ್ಯಮಟ್ಟದಲ್ಲಿ ಎಂಎಸ್‌ಪಿಗೆ ಕಾಯ್ದೆ ಜಾರಿಗೆ ತರಬೇಕು. ಇದರಿಂದ ರೈತರು ಬೆಳೆದ ಬೆಳೆಗಳಿಗೆ ಅನುಕೂಲವಾಗಲಿದೆ ಎಂದರು.

ಈ ಕಾಯ್ದೆಯಡಿ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿಸಿದರೆ ಖರೀದಿದಾರರಿಗೆ ಕನಿಷ್ಠ 1 ವರ್ಷ ಜೈಲು ಹಾಗೂ ದಂಡ ವಿಧಿಸಬೇಕು. ಪರವಾನಗಿ ರದ್ದು ಎಂಬ ಕಾನೂನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಬೆಂಬಲ ಬೆಲೆಗೆ ರಾಜ್ಯ ಸರ್ಕಾರವು ಘೋಷಣೆ ಮಾಡಿರುವ ಬೆಂಬಲ ಬೆಲೆಗೆ ರಾಜ್ಯ ಸರ್ಕಾರವು ಬೋನಸ್ ರೂಪದಲ್ಲಿ ಸಹಾಯಧನ ಸೇರಿಸಿ ರಾಜ್ಯ ಸರ್ಕಾರ ಬೆಂಬಲ ಬೆಲೆ ಘೋಷಿಸಬೇಕೆಂದು ಮನವಿ ಮಾಡಿದರು.

ಅಕಾಲಿಕ ಮಳೆಯಿಂದಾಗಿ ಹಾನಿಯುಂಟಾದ ಎಲ್ಲಾ ಬೆಳೆಗಳಿಗೆ ತಕ್ಷಣವೇ ವೈಜ್ಞಾನಿಕ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಪತ್ರಿಭಟನೆಯಲ್ಲಿ ಗುಮ್ಮನೂರು ಬಸವರಾಜ್, ಚಿರಂಜೀವಿ, ರಾಜು, ಭಗತ್ ಸಿಂಹ ಮತ್ತಿತರರಿದ್ದರು.




## ಯಲವಟ್ಟಿ ಪ್ರಾ.ಕೃ.ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜಿ. ಆಂಜನೇಯ




ಮಲೇಬೆನ್ನೂರು, ಮೇ 25 - ಯಲವಟ್ಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸಂಘದ ಸಂಸ್ಥಾಪಕ ಕಾರ್ಯದರ್ಶಿ ಜಿ. ಆಂಜನೇಯ ಮತ್ತು ಉಪಾಧ್ಯಕ್ಷರಾಗಿ ಎ. ಹನುಮಂತಪ್ಪ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಆಡಳಿತ ಮಂಡಳಿಯ ಸದಸ್ಯರು ಹಾಗೂ ಗ್ರಾಮದ ಮುಖಂಡರಾದ ಶ್ರೀಧರ್, ಕೆ. ನರಸಪ್ಪ, ಬಿ. ಸಿದ್ದೇಶ್, ಕೆ. ಮಂಜಪ್ಪ, ಡಿ. ಬಸವನಗೌಡ, ಖಲಂದರ್ ಸಾಬ್, ಮಾಕನೂರು ಹನುಮಂತಪ್ಪ, ಕೆ. ಚನ್ನಬಸಪ್ಪ ಸೇರಿದಂತೆ, ಇನ್ನೂ ಅನೇಕರು ಈ ವೇಳೆ ಹಾಜರಿದ್ದರು. ಚುನಾವಣಾಧಿಕಾರಿಯಾಗಿ ಸಹಕಾರಿ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನಿತಾ ಕಾರ್ಯನಿರ್ವಹಿಸಿದರು. ಸಂಘದ ಸಿಇಓ ಶೇಖರಪ್ಪ ಸ್ವಾಗತಿಸಿ, ವಂದಿಸಿದರು.

## ಗುಡಾಳು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಜಯ್ಯಮ್ಮ



ದಾವಣ ಗೆರೆ, ಮೇ 25- ತಾಲ್ಲೂಕಿನ ಗುಡಾಳು ಗ್ರಾಮ ಪಂಚಾ ಯಿತಿ ಅಧ್ಯಕ್ಷರಾಗಿ ಶ್ರೀಮತಿ ಜಯ್ಯಮ್ಮ ತಿಪ್ಪೇಸ್ವಾಮಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಿ. ರಾಘವೇಂದ್ರ ನಾಯ್ಕ್ ತಿಳಿಸಿದ್ದಾರೆ.

## ಮೇಲ್ಛಾವಣಿ ತಗಡು, ಯುಪಿಎಸ್ ಬ್ಯಾಟರಿ ಕಳ್ಳತನ: 2.21 ಲಕ್ಷ ಮೌಲ್ಯದ ಸ್ವತ್ತು ವಶ



ಚನ್ನಗಿರಿ, ಮೇ 25- ಮೇಲ್ಛಾವಣಿಯ ತಗಡು, ಯುಪಿಎಸ್ ಬ್ಯಾಟರಿ ಕಳ್ಳತನ ಮಾಡಿದ ಆರೋಪದ ಮೇಲೆ ಇಬ್ಬರು ಆರೋಪಿಗಳನ್ನು ಬಂಧಿಸಿ, 2.21 ಲಕ್ಷ ರೂ. ಮೌಲ್ಯದ ಸ್ವತ್ತು. ಬೊಲೆರೋ ಪಿಕ್‌ಅಪ್ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಚನ್ನಗಿರಿ ತಾಲ್ಲೂಕು ಕೊರಟಿಕೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಶೆಟ್ಟಿಹಳ್ಳಿ ಗ್ರಾಮದ ಗೋಮಾಳ ಜಾಗದಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಹಾಕಲಾಗಿದ್ದ ಮೇಲ್ಛಾವಣಿ ತಗಡುಗಳನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದರು. ಈ ಸಂಬಂಧ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳಾದ ಪ್ರಜ್ವಲ್, ಕೃಷ್ಣಮೂರ್ತಿ ಪಾಂಡೋಮಟ್ಟಿ ಎಂಬುವವರನ್ನು ಬಂಧಿಸಿ, ಇವರಿಂದ 2.21 ಲಕ್ಷ ರೂ. ಬೆಲೆ ಬಾಳುವ ತಗಡುಗಳು, ಇದಕ್ಕೆ ಬಳಸಿದ್ದ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾದ ಚನ್ನಗಿರಿ ಪೊಲೀಸ್ ಠಾಣೆಯ ಸಿಪಿಐ ಪಿ.ಬಿ. ಮಧು, ಪಿಎಸ್‌ಐ ಕೆ.ಎನ್. ಚಂದ್ರಶೇಖರ್, ಎಎಸ್‌ಐ ಹೆಚ್.ಎನ್. ಶಶಿಧರ, ಸಿಬ್ಬಂದಿ ರಂಗಪ್ಪ, ಬೀರೇಶ್ ಪುಟ್ಟಕ್ಕನವರ್, ಅರುಣ್ ಕುಮಾರ್, ನರೇಂದ್ರಸ್ವಾಮಿ, ಬೀರಪ್ಪ, ಜಗದೀಶ್ ಅವರನ್ನು ಎಸ್ಪಿ ಡಾ. ಅರುಣ್ ಶ್ಲಾಘಿಸಿದ್ದಾರೆ.

**ಪುರಸಭೆ, ಕಾರ್ಯಾಲಯ, ಮಲೇಬೆನ್ನೂರು,**
(ದಾವಣಗೆರೆ ಜಿಲ್ಲೆ) Phone: 08192-268858
Email: itstaff_ulb_malebennuru@yahoo.com
ಕ್ರಮಾಂಕ/ಪುಸಮ/ಕಂದಾಯ/ವಹಿ/56 /2023–24 ದಿ:23–05–2023

**ಬಹಿರಂಗ ಮರು ಹರಾಜು ಪ್ರಕಟಣೆ**

ಮಲೇಬೆನ್ನೂರು ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, 2023–24ನೇ ಸಾಲಿಗೆ ಕುರಿ, ಕೋಳಿ ಮಟನ್ ಮಾರುಕಟ್ಟೆಗಳನ್ನು ದಿನಾಂಕ:01–04–2023 ರಿಂದ 31–03–2024 ನೇ ಸಾಲಿನ ಅವಧಿಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸುಂಕ ವಸೂಲಿ ಮಾಡುವ ಹಕ್ಕನ್ನು ದಿನಾಂಕ:31–05–2023 ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಪುರಸಭಾ ಕಛೇರಿ ಸಭಾಂಗಣದಲ್ಲಿ ಬಹಿರಂಗ ಮರು ಹರಾಜನ್ನು ಮಾಡಲಾಗುವುದು. ಪ್ರಯುಕ್ತ, ಸದರಿ ಹರಾಜಿನಲ್ಲಿ ಭಾಗವಹಿಸುವವರು ದಿ: 30–05–2023 ರ ಮಂಗಳವಾರ ಮಧ್ಯಾಹ್ನ 4.30ರ ಒಳಗಾಗಿ ಈ ಕೆಳಗೆ ನಮೂದಿಸಿದ ಮಾರುಕಟ್ಟೆಗಳಿಗೆ ಪ್ರತ್ಯೇಕವಾಗಿ ಠೇವಣಿ ಮೊತ್ತವನ್ನು ಡಿ.ಡಿ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಪ್ರಯುಕ್ತ ಆಸಕ್ತಿಯುಳ್ಳವರು ಭಾಗವಹಿಸಲು ಕೋರಿದೆ. ವಿವರ:– ಕುರಿ–ಕೋಳಿ ಮಟನ್ ಮಾರುಕಟ್ಟೆ. ಕಟ್ಟಬೇಕಾದ ಠೇವಣಿ ಮೊತ್ತ:– 15,000/– ವಿಶೇಷ ಸೂಚನೆ : ಸದರಿ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಡಿ.ಡಿ ಮೂಲಕವೇ ಸ್ವಿಕರಿಸಲಾಗುವುದು ನಗದು ರೂಪದಲ್ಲಿ ಸಲ್ಲಿಸುವ ಠೇವಣಿಯನ್ನು ಸ್ವೀಕರಿಸಲಾಗುವುದಿಲ್ಲ.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಮಲೇಬೆನ್ನೂರು
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಮಲೇಬೆನ್ನೂರು
ವಾಸಾಇ/ದಾವಣಗೆರೆ/27/ಎಂಸಿಎ/2023–24

**TEACHERS REQUIRED**

**HIGH SCHOOL**
English : MA B.Ed ( English major)
Hindi : Hindi B.Ed., Social: MA B.Ed.,
Science : MSc B.Ed., ( CBZ)

**HIGHER PRIMARY**
Maths : BSc B.Ed., PM Method

**PRIMARY**
English : BA., B.Ed., English Major

**LKG UKG**
NTC trained teachers Or D.Ed Teacher

**PATEL VEERAPPA ENGLISH MEDIUM HIGHER PRIMARY AND HIGH SCHOOL (PVS)**
*(Recognised by Government of Karnataka)*
# 19/1, Ganganarasi Road, Kakkaragolla (P),
Davanagere (T), (D)-577 589
*Please send your resume to*
pvsprimary@gmail.com
Conatct : 99809 33292, 97410 52600, 97401 37642

## ನಗರದಲ್ಲಿಂದು ಪ್ರತಿಜ್ಞಾ ವಿಧಿ ಸ್ವೀಕಾರ

ಎಸ್.ಎಸ್. ಇನ್‌ಸ್ಟಿಟ್ಯೂಟ್ ವತಿಯಿಂದ 19ನೇ ಬ್ಯಾಚ್‌ನ ಬಿ.ಎಸ್ಸಿ. ನರ್ಸಿಂಗ್ ಮತ್ತು ಜಿಎನ್‌ಎಂ ವಿದ್ಯಾರ್ಥಿಗಳ ದೀಪ ಬೆಳಗುವ ಮತ್ತು ಪ್ರತಿಜ್ಞಾ ವಿಧಿ ಕಾರ್ಯಕ್ರಮ ಇಂದು ಬೆಳಿಗ್ಗೆ 10.30 ಕ್ಕೆ ಎಸ್‌ಎಸ್‌ಐಎಂಎಸ್ ಮತ್ತು ಆರ್‌ಸಿ ಆಸ್ಪತ್ರೆ ಸಭಾಂಗಣದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಡಾ. ಪ್ರಭಾ ಮಲ್ಲಿಕಾರ್ಜುನ್ ಮತ್ತು ಡಾ. ಅರುಣ್‌ಕುಮಾರ್ ಅಜ್ಜಪ್ಪ ಆಗಮಿಸುವರು. ಕಾರ್ಯಕ್ರಮದಲ್ಲಿ ಶ್ರೀಮತಿ ಪ್ರಭಾ ಕಳಸ್ ಗೌರವಾನ್ವಿತ ಅತಿಥಿಗಳಾಗಿರುತ್ತಾರೆ. ಪ್ರಾಂಶುಪಾಲ ವೀರೇಶ್ ವಿ.ಬಿ. ಅಧ್ಯಕ್ಷತೆ ವಹಿಸುವರು. ಸಂಜೆ 5.30 ಕ್ಕೆ ಎಸ್.ಎಸ್.ಐ.ಎನ್.ಎಸ್. ಕಾಲೇಜಿನ ಹಿಂಭಾಗದಲ್ಲಿರುವ ಹೊರಾಂಗಣ ಸಭಾಂಗಣದಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ ನಡೆಯುವುದು.

ಮುಖ್ಯ ಅತಿಥಿಗಳಾಗಿ ಸಂಪಣ್ಣ ಮುತಾಲಿಕ್ ಹಾಗೂ ಎಸ್‌ಎಸ್‌ಐಎಂಎಸ್ ಮತ್ತು ಆರ್‌ಸಿ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್ ಆಗಮಿಸುವರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ವೀರೇಶ್ ವಿ.ಬಿ. ವಹಿಸುವರು.

## ವೃತ್ತಿ ಕೋರ್ಸ್‌ಗಳಿಗೆ ಪ್ರವೇಶ ಆರಂಭ

ದಾವಣಗೆರೆ, ಮೇ 25- ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಆನ್‌ಲೈನ್ ಪ್ರವೇಶಕ್ಕೆ ಅಧಿಸೂಚನೆ ಹೊರಡಿಸಲಾಗಿದ್ದು, ಸಂಸ್ಥೆಯಲ್ಲಿ ಲಭ್ಯವಿರುವ ವೃತ್ತಿ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಇಲಾಖಾ ವೆಬ್‌ಸೈಟ್ www.cite.karnataka.gov.inನಲ್ಲಿ ಯಾವುದೇ ಸರ್ಕಾರಿ ತರಬೇತಿ ಸಂಸ್ಥೆ ಅಥವಾ ಇಂಟರ್‌ನೆಟ್ ಕೆಫೆ/ಸೈಬರ್ ಸೆಂಟರ್‌ನಲ್ಲಿ ರಾಜ್ಯದ ಯಾವುದೇ ಭಾಗದಿಂದ ಮೇ 24ರಿಂದ ಜೂನ್ 7ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

## ವಿವಿಧ ಕೋರ್ಸ್‌ಗಳಿಗೆ ತರಬೇತಿ

ಬೆಂಗಳೂರು, ಮೇ 25- ನ್ಯಾಷನಲ್ ಅಕಾಡೆಮಿ ಆಫ್ ಸೈಬರ್ ಸೆಕ್ಯುರಿಟಿ (ಎನ್.ಎ.ಸಿ.ಎಸ್) ವತಿಯಿಂದ ಆನ್‌ಲೈನ್ ಸೈಬರ್ ಸೆಕ್ಯೂರಿಟಿ ವಿವಿಧ ಕೋರ್ಸ್‌ಗಳ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ ಪಾಸ್, ಐಟಿಐ, ಪದವಿ, ಎಂಜಿನಿಯರಿಂಗ್, ಪಾಲಿಟೆಕ್ನಿಕ್ ಡಿಪ್ಲೋಮಾ ಆಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ವೆಬ್ www.nacsindia.org ಮೂಲಕ ಅರ್ಜಿ ಸಲ್ಲಿಸಲು 9-6-2023 ಕೊನೆ ದಿನವಾಗಿದೆ. ವಿವರಕ್ಕೆ ಸಂಪರ್ಕಿಸಿ:7893141797.

**ANMOL PUBLIC SCHOOL**
**ANMOL SCIENCE PU COLLEGE**
SHIRAMAGONDANAHALLI, DAVANGERE-5.
**WANTED**

| POSITION | QUALIFICATION |
|---|---|
| TGT Hindi | BA., B.Ed., |
| TGT Social Science | BA., B.Ed., |
| TGT Computer Science | Any Degree |
| Physical Education (PE) | B.P.Ed.,/M.P.Ed., |

mail. : Jobs@anmoleducation.com / +91 7625078002
web. : www.anmoleducation.com / + 91 9980819660

**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ **ಶ್ರೀ ಎಲ್.ಎಸ್. ಪ್ರಶಾಂತ ಬಿನ್ ಲೇ. ಎಲ್. ಶ್ರೀನಿವಾಸಮೂರ್ತಿ** ಇವರು ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು **ಶ್ರೀಮತಿ ಶಿಲ್ಪ ಕೋಂ ಕಿಷ್ಣಪ್ಪ ಹೆಂಡೆಗಾರ್** ಇವರಿಂದ ಖರೀದಿಸಲು ಇಚ್ಛಿಸಿದ್ದು, ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು, ಬಾಧ್ಯತೆಗಳು ಅಥವಾ ತಕರಾರು ಇದ್ದಲ್ಲಿ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ತಕರಾರನ್ನು ದಾಖಲೆಗಳೊಂದಿಗೆ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾವುದೇ ಹಕ್ಕು, ಬಾಧ್ಯತೆ ಅಥವಾ ತಕರಾರು ಇರುವುದಿಲ್ಲ ಎಂದು ಪರಿಗಣಿಸಲಾಗುವುದು.

**ಷೆಡ್ಯೂಲ್ :**

ದಾವಣಗೆರೆ ತಾಲ್ಲೂಕು ಸಬ್‌ರಿಜಿಸ್ಟ್ರಾರ್‌ವರ ಕಛೇರಿಯ ಅಧಿಕಾರಕ್ಕೆ ಸೇರಿದ, ದಾವಣಗೆರೆ ನಗರ ಸರಹದ್ದಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಕುಂದುವಾಡ ಗ್ರಾಮದ ರೀ ಸರ್ವೆ ನಂ. 205/2ವುಳ್ಳ ಜಮೀನು ಈ ಹಿಂದೆ ವಾಸೋಪಯೋಗಕ್ಕಾಗಿ ಚಿತ್ರದುರ್ಗ ಜಿಲ್ಲಾ ವಿಶೇಷ ಜಿಲ್ಲಾಧಿಕಾರಿಗಳವರ ಆರ್ಡರ್ ನಂ. ಎಎಲೆನ್/ಎಸ್‌ಆರ್ 66/85-86 ದಿನಾಂಕ : 29.08.1985ರ ಆರ್ಡರ್ ಪ್ರಕಾರ ಪರಿವರ್ತನೆಯಾಗಿದ್ದು, ಸದರಿ ಪರಿವರ್ತನೆಯಾದ ಪ್ರದೇಶ ಹಾಗೂ ಇದಕ್ಕೆ ಲಗತ್ತಾದ ಶ್ಯಾಬನೂರು ಗ್ರಾಮದ ರಿ. ಸರ್ವೆ ನಂ. 43ವುಳ್ಳ ಪರಿವರ್ತನೆಯಾದ ಪ್ರದೇಶವನ್ನು ಒಂದುಗೂಡಿಸಿ, ಒಂದು ಕಂಬೈನ್ಡ್ ಲೇಔಟ್ ಪ್ಲಾನನ್ನು ದಾವಣಗೆರೆ ನಗರ ಯೋಜನಾ ಪ್ರಾಧಿಕಾರ ಇವರಿಂದ ದಿನಾಂಕ : 28.07.1986ರಲ್ಲಿ ನಂ.17 ರ ಪ್ರಕಾರ ಅಪ್ರೂವಲ್ ಆಗಿರುವ ಪ್ಲಾನ್‌ನಲ್ಲಿ ಕಂಡಂತೆ ವಿಂಗಡಿಸಿರುವ ಸೈಟುಗಳ ಪೈಕಿ ಸೈಟ್ ನಂ. 139ಕ್ಕೆ ಈ ಹಿಂದೆ ದೊಡ್ಡಬಾತಿ ಮಂಡಲ ಪಂಚಾಯಿತಿಗೆ ಡೋರ್ ನಂಬರ್ ಶುಲ್ಕ ಪಾವತಿ ಮಾಡಿ ಪಂಚಾಯಿತಿ ಡೋರ್ ನಂಬರು ದಾಖಲಾಗಿರುವ, ಇತ್ತೀಚೆಗೆ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟು ಕುಂದುವಾಡ ವಿಭಾಗದಲ್ಲಿ ದಾಖಲಾಗಿ, ದಾವಣಗೆರೆ ಸಿಟಿ ಚಿಗಟೇರಿ ಲೇ ಔಟ್‌ನಲ್ಲಿ ಬರತಕ್ಕ ಸೈಟುಗಳ ಪೈಕಿ ಸೈಟ್. ನಂ.139 ಡೋರ್ ನಂ. 2221 ದಾವಣಗೆರೆ ಮಹಾನಗರ ಪಾಲಿಕೆಯ ಚಾಲ್ತಿ ಡೋರ್‌ನಂ. 2221/139 ಅಳತೆ ಪೂರ್ವ-ಪಶ್ಚಿಮ 60 ಅಡಿ, ಉತ್ತರ-ದಕ್ಷಿಣ 40 ಅಡಿ (60X40)ವುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ:

**ಪೂರ್ವ - 40 ಅಡಿ ಅಗಲದ ರೋಡ್, ಪಶ್ಚಿಮ - ಸೈಟ್‌ನಂ.120**
**ಉತ್ತರ - ಸೈಟ್‌ನಂ. 138, ದಕ್ಷಿಣ - ಸೈಟ್ ನಂ.140 ಈ ಮಧ್ಯದ ಸೊತ್ತು.**

**K.B. Shailashree,** B.Sc., LL.B PGDM (Genetics) Advocate KAR-70/98
SS Layout 'A' Block Davangere. **Mob No. : 9448658502**

## ಮಾಜಿ ಶಾಸಕರಿಂದ ಫುಟ್‌ಪಾತ್ ವ್ಯಾಪಾರಿಗಳ ಸ್ಥಿತಿಗತಿ ವಿಚಾರಣೆ



ಹರಿಹರ, ಮೇ 25- ಮಾಜಿ ಶಾಸಕ ಎಸ್.ರಾಮಪ್ಪ ನಗರದ ಫುಟ್‌ಪಾತ್ ಅಂಗಡಿಗಳಿಗೆ ತೆರಳಿ ವ್ಯಾಪಾರ ವಹಿವಾಟಿನ ವಿಚಾರಗಳ ಮಾಹಿತಿ ಸಂಗ್ರಹಿಸಿದರು. ಈ ಸಂದರ್ಭದಲ್ಲಿ ತಿಪ್ಪೇಸ್ವಾಮಿ, ಅಮ್ಜದ್ ಆಹ್ಮದ್ ಇತರರು ಹಾಜರಿದ್ದರು.

## ಐಗೂರು ಶಿವಮೂರ್ತಪ್ಪ, ಕ.ರಾ.ರೈತ ಸಂಘದ ತಾ. ಸಮಿತಿ ಅಧ್ಯಕ್ಷ



ದಾವಣಗೆರೆ, ಮೇ 25- ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಸಮಿತಿ ಅಧ್ಯಕ್ಷರಾಗಿ ಐಗೂರು ಶಿವಮೂರ್ತಪ್ಪ ಆಯ್ಕೆಯಾಗಿದ್ದಾರೆ.

ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್. ಪ್ರಸಾದ್ ಮತ್ತು ರಾಜ್ಯ ಕಾರ್ಯದರ್ಶಿ ಬಲ್ಲೂರು ಶಿವಕುಮಾರ್ ಅವರ ಸಮ್ಮುಖದಲ್ಲಿ ಜರುಗಿದ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು.

ಸಮಿತಿ ಗೌರವಾಧ್ಯಕ್ಷರಾಗಿ ಸಿ.ಆರ್.ಭೀಮಾ ನಾಯ್ಕ, ಪ್ರಧಾನ ಕಾರ್ಯಾಧ್ಯಕ್ಷರಾಗಿ ನಾಗರ ಕಟ್ಟೆ ಜಯನಾಯ್ಕ, ಉಪಾಧ್ಯಕ್ಷರಾಗಿ ಪ್ರತಾಪ್ ಮಾಯಕೊಂಡ, ಚೌಡಪ್ಪ ನರಗನಹಳ್ಳಿ, ಆವರಗೆರೆ ಕಲ್ಲೇಶಪ್ಪ, ಹನುಮಂತಪ್ಪ ಬಾಡ, ಐಗೂರು ನಾಗರಾಜ್, ಬಿ.ಟಿ.ಕುಮಾರ್ ಬಲ್ಲೂರು, ಸಂಘಟನಾ ಕಾರ್ಯದರ್ಶಿ ಬಿ.ಎಂ.ಚನ್ನೇಶ್ ಅವರುಗಳು ಆಯ್ಕೆಯಾಗಿದ್ದಾರೆ.

## ಅಂಚೆ ವಿಭಾಗದಿಂದ ಯೋಜನೆಗಳ ಮೇಳ ಇಂದು

ದಾವಣಗೆರೆ ಅಂಚೆ ವಿಭಾಗದಿಂದ ಅಂಚೆ ಇಲಾಖೆಯ ಯೋಜನೆಗಳ ಮೇಳವನ್ನು ಬಾಪೂಜಿ ಫಾರ್ಮಸಿ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ. ಈ ಮೇಳದಲ್ಲಿ ಆಧಾರ್ ಹೊಸ ನೋಂದಣಿ ಮತ್ತು ತಿದ್ದುಪಡಿ, ಐ.ಪಿ.ಪಿ.ಬಿ. ಹೊಸ ಖಾತೆಗಳು ಮತ್ತು ಅಪಘಾತ ವಿಮೆಗಳು, ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ, ಉಳಿತಾಯ ಖಾತೆ, ಮಹಿಳಾ ಸಮ್ಮಾನ್ ಉಳಿತಾಯ ಖಾತೆಗಳ ಸೇವೆ ಒದಗಿಸಲಾಗುವುದು.

ವಿವರಕ್ಕೆ ಅಂಚೆ ಕಚೇರಿಯ ಮಾರುಕಟ್ಟೆ ಕಾರ್ಯನಿರ್ವಹಕ ಅಧಿಕಾರಿ ಬಿ. ಸಂತೋಷ್ ಕುಮಾರ್ (88611 26883) ಅವರನ್ನು ಸಂಪರ್ಕಿಸಬಹುದು.

## ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಸದಸ್ಯರಾಗಿ ಒಡೆಯರ್



ದಾವಣಗೆರೆ, ಮೇ 25- ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ನಗರದ 'ಪವಿತ್ರ ಪ್ರಜಾ' ಸಂಪಾದಕ ಎಸ್.ಕೆ. ಒಡೆಯರ್ ನೇಮಕಗೊಂಡಿದ್ದಾರೆ.

ಈವರೆಗೂ ಈ ಸ್ಥಾನದಲ್ಲಿದ್ದ ಜಗಳೂರಿನ ಕೊಟ್ರೇಶ್ ಅಣಬೂರ್ ಮಠ ಅವರ ಅವಧಿ ಮುಗಿದ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆಯ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದ ಜಿಲ್ಲಾ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೈಗೊಂಡ ಒಮ್ಮತದ ತೀರ್ಮಾನದಂತೆ ಒಡೆಯರ್ ಅವರನ್ನು ನೇಮಕ ಮಾಡಲಾಗಿದೆ.

ಜಿಲ್ಲಾ ಸಂಘದ ಶಿಫಾರಸ್ಸಿನ ಮೇರೆಗೆ ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಈ ನೇಮಕ ಮಾಡಿದ್ದಾರೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ತಿಳಿಸಿದ್ದಾರೆ.

ಒಡೆಯರ್ ಅವರನ್ನು ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಣ್ಣ, ಖಜಾಂಚಿ ಎನ್.ವಿ. ಬದರೀನಾಥ್ ಮತ್ತು ಪದಾಧಿಕಾರಿಗಳು, ಸರ್ವ ಸದಸ್ಯರು ಅಭಿನಂದಿಸಿದ್ದಾರೆ.

## ನ್ಯಾಮತಿ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ಇಲ್ಲ

ನ್ಯಾಮತಿ ಮತ್ತು ಸವಳಂಗದಲ್ಲಿ ನಿರ್ವಹಣಾ ಕೆಲಸ ಹಮ್ಮಿಕೊಂಡಿದ್ದು, ಸದರಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನ್ಯಾಮತಿ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ರೀನಿವಾಸ್ ಬಿ.ಕೆ. ತಿಳಿಸಿದ್ದಾರೆ.

## ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಮೇ 25- 2023ನೇ ಸಾಲಿನ ರಾಜ್ಯ ಸರ್ಕಾರದ ಅಧಿಕಾರಿ/ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ಪಡೆಯಲು ನಾಮ ನಿರ್ದೇಶನಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಬರುವ ಜೂ. 15 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.


**ಹುಟ್ಟುಹಬ್ಬದ ಶುಭಾಶಯಗಳು**

ದಿನಾಂಕ 26.5.2023ರಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಎಸ್. ನಿಜಲಿಂಗಪ್ಪ ಬಡಾವಣೆ 8ನೇ ಕ್ರಾಸ್, ಅಪೋಲೋ ಮೆಡಿಕಲ್ಸ್ ಹತ್ತಿರದ ಮಲ್ಲಣ್ಣ ಹೋಟೆಲ್ ಮಾಲೀಕರಾದ **ಶ್ರೀ ಬಿ.ವಿ. ಮಲ್ಲೇಶ್** ಅವರಿಗೆ ಹಾರ್ದಿಕ ಶುಭಾಶಯಗಳು. ಭಗವಂತನು ಆಯುರಾರೋಗ್ಯ ಭಾಗ್ಯ ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇವೆ.




ಬಂಧು-ಮಿತ್ರರು ಮತ್ತು ಸ್ನೇಹಿತರು

**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ ದಿ ವೆಡ್ಡಿಂಗ್ ಮಾಲ್.... ಚಾಮರಾಜ ಪೇಟೆ, ದಾವಣಗೆರೆ. 9686195327






॥ ಶ್ರೀ ಹರಿಹರೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ತಾ॥ ಕಕ್ಕರಗೊಳ್ಳ ಗ್ರಾಮದ ವಾಸಿ **ಶ್ರೀ ಹುಲ್ಲತ್ತಿ ಶಿವಪ್ಪನವರು** ಮಾಡುವ ವಿಜ್ಞಾಪನೆಗಳು.
ದಿನಾಂಕ : 18-05-2023ನೇ ಗುರುವಾರ ರಾತ್ರಿ 11-15ಕ್ಕೆ ದಾವಣಗೆರೆ ಪಿ.ಜೆ. ಬಡಾವಣೆ ವಾಸಿ ನನ್ನ ಅಣ್ಣನವರಾದ ದಿ. ಹುಲ್ಲತ್ತಿ ಭರಮಪ್ಪನವರ ಧರ್ಮಪತ್ನಿ

**ಶ್ರೀಮತಿ ನೀಲಮ್ಮನವರು**

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 26-05-2023ನೇ ಶುಕ್ರವಾರ ಬೆಳಿಗ್ಗೆ 10-30ಕ್ಕೆ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿ (ರಿ.) ಶ್ರೀಮತಿ ಪಾರ್ವತಮ್ಮ ಡಾ॥ ಶಿವಶಂಕರಪ್ಪ ಸಮುದಾಯ ಭವನ, 1ನೇ ಮುಖ್ಯ ರಸ್ತೆ, ವಿನೋಬನಗರ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹುಲ್ಲತ್ತಿ ವಂಶಸ್ಥರು ಹಾಗೂ ಬಂಧು-ಮಿತ್ರರು.
ಇಂದ : ಹೆಚ್.ಬಿ ಬಸವರಾಜ್, ಹೆಚ್.ಬಿ. ನಾಗರಾಜ್, ಶ್ರೀಮತಿ ಸರೋಜ ಚಂದ್ರಶೇಖರಪ್ಪ ಶ್ರೀಮತಿ ಪುಷ್ಪ ಕುಮಾರ ಸ್ವಾಮಿ .
ಪಿ.ಜೆ. ಬಡಾವಣೆ, 7ನೇ ಮೇನ್, ದಾವಣಗೆರೆ. ಮೊ : 99169 57912, 9886366441

ವಿ.ಸೂ : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೆ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ






**ಇಂಡಿಯನ್ ಕ್ರಾಫ್ಟ್ ಎಕ್ಸ್‌ಪೋ**

Exhibition Cum Sale @ DAVANGERE

Regd. by : O/o. D.C.H. Ministry of India Real Indian Craft....

GRAND OPENING 24-5-2023 | Daily 10.30 am to 9.30 pm

Exhibition cum Sale SPECIAL DISCOUNT SALE




ಭಾರತದ ಎಲ್ಲಾ ರಾಜ್ಯಗಳ 10 ಸಾವಿರಕ್ಕೂ ಮೇಲ್ಪಟ್ಟು ವಿವಿಧ ಪ್ರಕಾರದ ಕರಕುಶಲ ಪ್ರದರ್ಶನ ಹಾಗೂ ಮಾರಾಟ

ಓಪನ್ ಗ್ರೌಂಡ್ ನರಹರಿಶೇಟ್ ಕಲ್ಯಾಣ ಮಂಟಪದ ಎದುರು, ಪಿ.ಬಿ. ರಸ್ತೆ, ದಾವಣಗೆರೆ



**ವೆಂಕಟರತ್ನಮ್ಮ ಕಾಣೆಯಾಗಿದ್ದಾರೆ**



**ಶ್ರೀಮತಿ ವೆಂಕಟರತ್ನಮ್ಮ**
W/o ಗಾಂಧಿ, ವಯಸ್ಸು 88 ವರ್ಷ, ಇವರು ದಾವಣಗೆರೆ ಬಾಲಾಜಿ ನಗರ, 2ನೇ ಹಂತ, ಎಸ್.ಎಸ್. ಬಡಾವಣೆ, 2ನೇ ಕ್ರಾಸ್ # 3616/87 ಮನೆಯಿಂದ ದಿನಾಂಕ 23.5.2023ರಂದು ಬೆಳಿಗ್ಗೆ 11 ಗಂಟೆಗೆ ಕಾಣೆಯಾಗಿದ್ದಾರೆ. ತೆಲುಗು, ಕನ್ನಡ ಎರಡೂ ಭಾಷೆಗಳನ್ನು ಮಾತನಾಡುತ್ತಾರೆ. ಇವರು ಮನೆಯಿಂದ ಹೋಗುವಾಗ ಗುಲಾಬಿ ಬಣ್ಣದ ನೈಟಿಯನ್ನು ಧರಿಸಿರುತ್ತಾರೆ. ಗಂಟಲು ಹತ್ತರ ಗಡ್ಡೆ ಇರುತ್ತದೆ. ಮೂಲತಃ ಕಣವೆಬಿಳಚಿಯವರಾದ ಇವರು ಎಲ್ಲಿಯಾದರೂ ಕಂಡುಬಂದಲ್ಲಿ ಈ ಕೆಳಗಿನ ಮೊಬೈಲ್ ನಂಬರ್‌ಗಳಿಗೆ ಸಂಪರ್ಕಿಸುವಂತೆ ಕೋರಲಾಗಿದೆ.

ವಿ. ಶ್ರೀನಿವಾಸರಾವ್
ಮೊ. 94489-24346, 94494-74521



**ದಾವಣಗೆರೆಯಲ್ಲಿ ಪ್ರಪ್ರಥಮ ಬಾರಿಗೆ ಬೃಹತ್ ಕ್ರಾಕರಿ ಮೇಳ**

IMPORTED & INDIAN BIGGEST CROCKERY SALE

More than 50000 varieties of household articles at one roof

Microwave related Glass & Plastic Items
Thailand, France, Germany Glassware, Fancy Plastic Items, Bone china Pingani & Glass Items

1 kg Rs. 299/-

100% FOOD GRADE PURE MELAMINE



upto 50% off

Luminarc Ocean CORELLE

ಸ್ಥಳ : ಗುರುಭವನ ಎ.ವಿ.ಕೆ. ಕಾಲೇಜ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ